MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

YUVA MARGA KANNADA DAILY NEWS PAPER

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 34 | ಗುರುವಾರ : 20-11-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 34 | THURSDAY : 20-11-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

### ಸರ್ವೋದಯ ಪಿಯು ಕಾಲೇಜಿನಲ್ಲಿ ಮಾನ್ವಿ ತಾಕಸಾಪ ದತ್ತಿ ಉಪನ್ಯಾಸ, ಸನ್ಮಾನ ಸಮಾರಂಭ

## ದತ್ತಿ ಉಪನ್ಯಾಸಗಳು ಕನ್ನಡ ಭಾಷೆ, ಸಾಹಿತ್ಯದ ಬೆಳವಣಿಗೆಗೆ ನಾಂದಿಯಿದ್ದಂತೆ : ಸಿದ್ದಲಿಂಗಪ್ಪ ವಕೀಲ

ಯುವಮಾರ್ಗ ಸುದ್ದಿ

**ಮಾನ್ವಿ,ನ.19–** ದತ್ತಿ ಉಪನ್ಯಾಸಗಳು, ಕಾದಂ ಬರಿಗಳ ಮರು ಓದು ಮತ್ತು ವಿಮರ್ಶೆ ಮಹತ್ವವನ್ನು ಪಡೆಯುತ್ತಿದೆ. ಇಂತಹ ಕಾರ್ಯಕ್ರಮಗಳು ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಜನರು ಇನ್ನಷ್ಟು ಸ್ಪಂದಿಸುವು ದರ ಜೊತೆಗೆ ಕನ್ನಡದ ಭವ್ಯ ಪರಂಪರೆಯ ಉಳಿಸಿ ಬೆಳೆಸಲು ಕಾರಣ ವಾಗಬಲ್ಲದು ಎಂದು ಹಿರಿಯ ನ್ಯಾಯ ವಾದಿ ಸಿದ್ದಲಿಂಗಪ್ಪ ವಕೀಲ ಚಿಕ್ಕಕೊಟ್ನೆಕಲ್ ಹೇಳಿದರು.

–ಪಟ್ಟಣದ ಸರ್ವೋದಯ ಪಿಯು ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಹಾಗೂ ತಾಲೂಕ ಘಟಕಗಳ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ದತ್ತಿ ಉಪ



ನ್ಯಾಸ ಹಾ ಗೂ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ದತ್ತಿನಿಧಿ ಎಂದರೆ ತಮ್ಮ ಹಿರಿಯರ ನೆನಪಿಗೆ ಅಥವಾ ತಮಗೆ ಉಪಕಾರ ಮಾಡಿದವರ ವಾರ್ಷಿಕ ಸ್ಮರಣೆಗೆ ಅಥವಾ ನಾಡು ನುಡಿಗಳ ಬಗ್ಗೆ ಈ ರೀತಿಯ ಕಾರ್ಯಕ್ರಮಗಳನ್ನು ನಡೆಸಬೇಕೆಂಬ ತಮ್ಮ ಆಶಯವಿದ್ದಂತೆ ಪರಿಷತ್ತಿನ ಸದಸ್ಯರು, ಹಿತೈಷಿಗಳು, ಸಾರ್ವಜನಿಕ ಗಣ್ಯರು, ಸಂಸ್ಥೆಗಳು ಶಾಶ್ವತ ಠೇವಣಿಯನ್ನು ಇಟ್ಟು ತಾವು ತಿಳಿಸಿದ ಪ್ರಕಾರ ಕಾರ್ಯ ಕ್ರಮ ಗಳನ್ನು ನಡೆಸಲು ವ್ಯವಸ್ಥೆ ಮಾಡು ವುದು ಹೀಗೆ ಪ್ರತಿವರ್ಷ ದತ್ತಿದಾನಿಗಳ ಆಶಯ ದಂತೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ದತ್ತಿ ನೀಡಿದ ಹಣವನ್ನು ಪರಿಷತ್ತಿನ ಹೆಸರಿನಲ್ಲಿ ಅಧಿಕೃತ ಬ್ಯಾಂಕಿನಲ್ಲಿ ಶಾಶ್ವತ ಠೇವಣಿಯಲ್ಲಿಡಲಾಗುತ್ತದೆ. ಬಡ್ಡಿ ಹಣದಿಂದ ದಾನಿಗಳ ಆಶಯದಂತೆ ವಾರ್ಷಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ನಾಡಿನ ನೆಲ, ಜಲ ಹಾಗೂ ಭಾಷೆಯ ಸಂರಕ್ಷಣೆ ಪ್ರತಿಯೊಬ್ಬ ಕನ್ನಡಿಗರ ಹೊಣೆ ಎಂದು ಸಿದ್ದಲಿಂಗಪ್ಪ ವಕೀಲ ಚಿಕ್ಕಕೊಟ್ನೆಕಲ್ ತಿಳಿಸಿದರು.

ಪುರಸಭೆ ವಿಪಕ್ಷದ ನಾಯಕ ರಾಜಾಮಹೇಂದ್ರನಾಯಕ ಮಾತನಾಡಿ ನಾಡು, ನುಡಿ ಬಗ್ಗೆ ಜನ ಜಾಗೃತಿ ಮೂಡಿಸುವ ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಿಗೆ ಎಲ್ಲರ ಸಹಕಾರ ಹಾಗೂ ಪ್ರೋತ್ಸಾಹ ಅಗತ್ಯ ಮತ್ತು **(2ನೇಪುಟಕ್ಕೆ..)**

## ಕಾಲ್ತುಳಿತಕ್ಕೆ ಆರ್‌ಸಿಬಿ ಹೊಣೆ



**ಬೆಂಗಳೂರು,ನ.19–**ಐಪಿಎಲ್ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಆರ್‌ಸಿಬಿಯೇ ನೇರ ಹೊಣೆ ಎನ್ನುವುದನ್ನು ಉಲ್ಲೇಖಿಸಿ ಆರೋಪಪಟ್ಟಿ (ಚಾರ್ಜ್ ಶೀಟ್) ಸಲ್ಲಿಕೆಗೆ ಸಿಐಡಿ ಸಿದ್ಧತೆ ಕೈಗೊಂಡಿದೆ.

ಕಾಲ್ತುಳಿತ ದುರಂತದಲ್ಲಿ 11 ಮಂದಿ ಪ್ರಾಣ ಕಳೆದುಕೊಂಡ ಘಟನೆ ಇಡೀ ದೇಶವನ್ನೇ ಬೆಚ್ಚಿಬೀಳಿಸಿ ರಾಜ್ಯ ಸರ್ಕಾರ, ಪೊಲೀಸ್ ಇಲಾಖೆಯ ವಿರುದ್ಧವೂ ಹಲವು ಗಂಭೀರ ಪ್ರಶ್ನೆಗಳು ಕೇಳಿಬಂದಿತ್ತು.

ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದ್ದ ಸಿಐಡಿ ಅಧಿಕಾರಿಗಳು ತನಿಖೆಯನ್ನು ಬಹುತೇಕ ಪೂರ್ಣಗೊಳಿಸಿ 2,200ಕ್ಕೂ ಹೆಚ್ಚು ಪುಟಗಳ ಚಾರ್ಜ್ ಶೀಟ್ ನ್ನು ಸಿದ್ಧಪಡಿಸಿದ್ದಾರೆ.**(2ನೇಪುಟಕ್ಕೆ..)**

## ಕಾಂಗ್ರೆಸ್ ಪಕ್ಷ ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ : ಶಾಸಕ ಆರ್. ಬಸನಗೌಡ



ಯುವಮಾರ್ಗ ಸುದ್ದಿ

**ಮಸ್ಕಿ,ನ.19–** ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆದು ಕೊಂಡು ಪಂಚ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜಾರಿಗೆ ತಂದಿದೆ ಇದರಿಂದ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಿದೆ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜ ನೆಗಳು ದೇಶಕ್ಕೆ ಮಾದರಿಯಾಗಿದೆ ಎಂದು ಖಾದಿ ಗ್ರಾಮ ದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್. ಬಸನಗೌಡ ತುರ್ವಿ ಹಾಳ ಹೇಳಿದರು.

ಮಸ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕನ್ನಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ನಡೆ ಗ್ರಾಮ ಪಂಚಾಯತ್ ಕಡೆ ಕಾರ್ಯಕ್ರಮದಲ್ಲಿ ಮಾತನಾ ಡಿದ ಅವರು ಈ ಹಿಂದೆ ರಾಜ್ಯದಲ್ಲಿ ಆಡಳಿತ ನಡೆಸಿದ್ದ ಬಿಜೆಪಿ ಸರ್ಕಾರ ರಾಜ್ಯವನ್ನು ದಿವಾಳಿ ಹಂತಕ್ಕೆ ತಂದಿತ್ತು. ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಶಾಸಕರನ್ನು ಖರೀದಿಸಿ ಅಗತ್ಯ ವಸ್ತುಗಳ ಬೆಲೆ ಏರಿಸಿ ಜನರಿಗೆ ತೊಂದರೆ ನೀಡಿದರು. ಈಗ ಕೆಲವರು ಸುಮ್ನೆ ಮೋದಿ ಮೋದಿ ಅಂ ತಾರೆ ಮುಂದಿನ ದಿನಗಳಲ್ಲಿ ಬಿಜೆಪಿ ಇರಲ್ಲ ಎಂದರು. ಅದಾನಿ ಅಂಬಾನಿ ಅವರಿಗೆ ಮಾತ್ರ ಮೋದಿ ಅನುಕೂಲ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.ಚುನಾವಣೆ ವೇಳೆ ನೀಡಿದ ಭರವ ಸೆಯಂತೆ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. ಕ್ಷೇತ್ರದಲ್ಲಿ 22 ಕ್ಕೂ ಅಧಿಕ ಕಡೆ ಕೆಎಂಎಫ್ ಆಶ್ರಯದಲ್ಲಿ ಸ್ವ ಸಹಾಯ ಒಕ್ಕೂಟಗಳ ಕ್ಷೀರ ಸಂಜೀವಿನಿ ಆರಂಭಿಸಲಾಗಿದೆ. ರೈತರ ಬೇಡಿಕೆಯಂತೆ ಕನ್ನಾಳದಲ್ಲಿ ಪಶು ಆಸ್ಪತ್ರೆ ಆರಂಭಿಸಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಐದು ಸಾವಿರ ಕೋಟಿ ರೂ. ವಿನಿಯೋಗಿಸಲಾ ಗುತ್ತಿದೆ. ರಾಜ್ಯ ಸರ್ಕಾರದ ಜನಪ್ರಿಯ ಯೋಜನೆಗಳು ಶಾಶ್ವತ ವಾಗಿರಲಿವೆ

ಮಸ್ಕಿ ಕ್ಷೇತ್ರದಲ್ಲಿ ಅರೋಗ್ಯ ಹಾಗೂ ಶಿಕ್ಷಣ ಸೇರಿದಂತೆ ಮೂಲಭೂತ ಸೌಕರ್ಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು.

ನಂತರ ಗ್ಯಾರಂಟಿ ಯೋಜನೆಗಳ ಸಮಿತಿ ತಾಲೂಕು ಅಧ್ಯಕ್ಷ ಮಹಿಬೂಬಸಾಬ್ ಮುದ್ದಾಪುರು ಮಾತನಾಡಿ ಪಂಚ ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ಅಭಿವೃದ್ಧಿಯಾಗಲಿದೆ ಎಂದರು.ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಮಹಿಬೂಬ್ ಸಾಬ್ ಮು ದ್ದಾಪುರ, ಕನ್ನಾಳ ಗ್ರಾಪಂ ಅಧ್ಯಕ್ಷೆ ಸರಸ್ವತಿ, ಗ್ರಾಪಂ ಉಪಾ ಧ್ಯಕ್ಷರಾದ ಹನುಮಂತ, ಜೆಸ್ಕಾಂ ಎಇಇ



ವೆಂಕಟೇಶ್, ಆಹಾರ ಇಲಾಖೆಯ ರಾಮಕೃಷ್ಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳಾದ ರಾಜೇಶ್ವರಿ, ಕೆಡಿಪಿ ಸದಸ್ಯರಾದ ಬಸವಂತಪ್ಪ ಮಟ್ಟೂರು, ಸಮಿತಿಯ ಸದಸ್ಯರಾದ ರವಿ ಪಾಟೀಲ್, ಚೆನ್ನಬಸವ, ಪೌಲ್ ರಾಜ್, ಶಂಕರಗೌಡ, ನಾಗರತ್ನ ಕಟ್ಟಿಮನೆ, ಸುರೇಶ್ ಕಜ್ಜಿ, ಬಾಲರಾಜ್, ಕನ್ನಾಳ ಗ್ರಾಪಂ ಪಿಡಿಒ ಕೃಷ್ಣ ಹುನಗುಂದ, ತಲೇಖಾನ್ ಗ್ರಾಪಂ ಪಿಡಿಒ ಜ್ಯೋತಿಬಾಯಿ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯ**(2ನೇಪುಟಕ್ಕೆ..)**

## ವಾಲ್ಮೀಕಿ ವೃತ್ತಕ್ಕೆ ಸಂಬಂಧಿಸಿದಂತೆ ಗೊಂದಲ; ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಶಾಸಕ ಜಿ.ಹಂಪಯ್ಯ ನಾಯಕ್

ಯುವಮಾರ್ಗ ಸುದ್ದಿ

**ಮಾನ್ವಿ,ನ.19–** ನಗರದಲ್ಲಿ ರಾಜ್ಯ ಹೆದ್ದಾರಿ ಕಾಮಗಾರಿ ನಡೆಯುತ್ತಿರುವ ಕರಡಿಗುಡ್ಡ ಕ್ರಾಸ್ ಬಳಿ ಇರುವ ವಾಲ್ಮೀಕಿ ವೃತ್ತಕ್ಕೆ ಸಂಬಂಧಿಸಿದಂತೆ ಸಮಾಜದ ಮುಖಂಡರು ಮತ್ತು ಅಧಿಕಾರಿಗಳೊಂದಿಗೆ ಮಾನ್ವಿ ಶಾಸಕ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರು ಸಭೆ ನಡೆಸಿ, ಸ್ಥಳ ಪರಿಶೀಲನೆ ನಡೆಸಿದರು. ಮಾನ್ವಿ ನಗರದ ಮೂಲಕ ಹಾದುಹೋಗುವ ಕಲ್ಮಲಾ ಕ್ರಾಸ್‌ನಿಂದ ಸಿಂಧನೂರುವರೆಗಿನ ರಸ್ತೆ ಕಾಮಗಾರಿ ನಡೆಯುತ್ತಿದ್ದು, ವಾಲ್ಮೀಕಿ ವೃತ್ತದ ಕೆಳಭಾಗದಲ್ಲಿ ಚರಂಡಿ ಕಾಮಗಾರಿ ಪ್ರಾರಂಭವಾದ ಕಾರಣ ಸಮಾಜದ ಮುಖಂಡರಲ್ಲಿ ಗೊಂದಲ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಶಾಸಕರು ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ (KSRDC) ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿದರು.

ಸಭೆ ಮತ್ತು ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಶಾಸಕ ಜಿ.ಹಂಪಯ್ಯ ನಾಯಕ್ ಸಾಹುಕಾರ್ ಅವರು ಅಧಿಕಾರಿಗಳಿಗೆ ಮಹತ್ವದ ಸೂಚನೆ ನೀಡಿದರು. ಅವರು ಮಾನ್ವಿ ನಗರದಲ್ಲಿರುವ ಪ್ರಮುಖ ಮೂರು ವೃತ್ತಗಳಾದ ಬಸವ ವೃತ್ತ, ವಾಲ್ಮೀಕಿ ವೃತ್ತ, ಮತ್ತು ಅಂಬೇಡ್ಕರ್ ವೃತ್ತಗಳ ಸಂಪೂರ್ಣ ಅಳತೆ ಮಾಡಿ, ಸಮರ್ಪಕವಾದ ನೀಲನಕ್ಷೆ ತಯಾರಿಸಲು ಅಧಿಕಾರಿಗಳಿಗೆ ಸೂಚಿಸಿದರು. ಈ ನಿರ್ದೇಶನವು ಕಾಮಗಾರಿಯ ಗುಣಮಟ್ಟ ಮತ್ತು ಸಮರ್ಪಕತೆಗೆ ಒತ್ತು ನೀಡಿದಂತಾಗಿದೆ.




ಈ ಸಂದರ್ಭದಲ್ಲಿ ಸಮಾಜದ ಮುಖಂಡರು, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಗುತ್ತಿಗೆ ಕಂಪನಿಯ ತಂಡದವರು ಉಪಸ್ಥಿತರಿದ್ದರು. ಮುಖಂಡರಲ್ಲಿ ಸೈಯದ್ ಖಾಲಿ ಖಾದ್ರಿ, ಸಿ. ಗುರುನಾಥ್ ನಾಯಕ್, ರಾಜ ಸುಭಾಷ್ ಚಂದ್ರ ನಾಯಕ್, ರಾಜ ಶಾಮ್ ಸುಂದರ್ ನಾಯಕ್, ಮಲ್ಲೇಶಿ ಜಗಲಿ, ಸತ್ತಾರ್ ಬಂಗ್ಲೆವಲೇ ಹಂಪಯ್ಯ ನಾಯಕ್ ಬೆಳಗಾನ್ ಪೇಟೆ, ನಾಯ್ಡು, ನಾರಾಯಣಸ್ವಾಮಿ, ಮತ್ತು ಬಸರಾಜ್ ಹಳಿಯಾಳ ಭಾಗವಹಿಸಿದ್ದರು. ಕೆ.ಎಸ್.ಆರ್.ಡಿ.ಸಿ (KSRDC) ಅಧಿಕಾರಿಗಳಾದ ಬಳ್ಳಾರಿ ವೃತ್ತದ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ (AE) ಪಿ.ಐ. ಸೋಮಶೇಖರ್, ಕೆಂಚ ರೆಡ್ಡಿ, ಮತ್ತು ಜೆಇ ವಿನೋದ್ ಅವರು ಸಭೆಯಲ್ಲಿ ಹಾಜರಿದ್ದರು. ಇದಲ್ಲದೆ, ಪುರಸಭೆಯ ಮುಖ್ಯ ಅಧಿಕಾರಿ ಪರಶುರಾಮ್ ದೇವ್ಮನೆ, ಜೆಇ ನೈಮ್ ಖಾಜಿ, ಲೋಕ ಉಪಯೋಗಿ ಇಲಾಖೆಯ (PWD) ಜೆಇ ಮಕಸೂದ್ ನಾಯ್ಕ್, ಹಾಗೂ ಗುತ್ತಿಗೆ ಪಡೆದಿರುವ ಕಂಪನಿಯ ಅಧಿಕಾರಿಗಳಾದ ವಿವೇಕ್ ಮತ್ತು ಅವರ ತಂಡದವರು ಸಹ ಉಪಸ್ಥಿತರಿದ್ದರು.

## ವನಸಿರಿ ಪೌಂಡೇಶನ್ ಕಾರ್ಯ ಶ್ಲಾಘನೀಯ: ಆರ್.ಬಸನಗೌಡ ತುರವಿಹಾಳ

ಯುವಮಾರ್ಗ ಸುದ್ದಿ

**ಸಿಂಧನೂರು,ನ.19–** ತಾಲೂಕಿನ ಉಮಲೂಟಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವನಸಿರಿ ಪೌಂಡೇಷನ್ (ರಿ)ರಾಯಚೂರು ವತಿಯಿಂದ ಸಾಲುಮರದ ತಿಮ್ಮಕ್ಕ ಸ್ಮರಣಾರ್ಥವಾಗಿ ಹಸಿರು ನಮನ ಕಾರ್ಯಕ್ರಮ ಹಾಗೂ 114 ಸಸಿ ನೆಡುವ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು. ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರಾದ ಬಸನಗೌಡ ತುರವಿಹಾಳ ಅವರು ವೃಕ್ಷ ಮಾತೆ ಸಾಲು ಮರದ ತಿಮ್ಮಕ್ಕ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಸಸಿಗಳನ್ನು ನೆಟ್ಟು ನೀರುಣಿಸುವ ಮೂಲಕ ಚಾಲನೆ ನೀಡಿದರು.ಪರಿಸರ ರಾಜ್ಯ ಪ್ರಶಸ್ತಿ ಪುರಸ್ಕೃತ ವನಸಿರಿ ಪೌಂಡೇಷನ್ ಅಧ್ಯಕ್ಷ ಅಮರೇಗೌಡ ಮಲ್ಲಾಪುರ ಅವರು ವಿದ್ಯಾರ್ಥಿಗಳೊಂದಿಗೆ ಒಂದೊಂದು ಗಿಡ ನೆಟ್ಟು ವೃಕ್ಷ ಮಾತೆಯ ಭಾವಚಿತ್ರಕ್ಕೆ ನಮನ ಸಲ್ಲಿಸಿದರು.



ನಂತರ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಮಸ್ಕಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ, ಆರ್ ಬಸನಗೌಡ ತುರವಿಹಾಳ ಮಾತನಾಡಿ, ತಿಮ್ಮಕ್ಕ ಅವರು ನಿಧನದ ಹಿನ್ನಲೆಯಲ್ಲಿ ಇಂದು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ವನಸಿರಿ ಪೌಂಡೇಷನ್ ವತಿಯಿಂದ 114 ಗಿಡಗಳನ್ನು ನೆಡುವ ಕಾರ್ಯ ಮಾಡುತ್ತಿರುವವುದು ಶ್ಲಾಘನೀಯ.

ಸಾಲುಮರದ ತಿಮ್ಮಕ್ಕ ಅವರು 114 ವರ್ಷಗಳ ಕಾಲದ ಜೀವಿತಾವಧಿಯಲ್ಲಿ ಮಾಡಿರುವ ಹಸಿರು ಕ್ರಾಂತಿ ಕಾರ್ಯ ಯಾವಾಗಲು ನಮ್ಮ ಮನದಲ್ಲಿ ಉಳಿಯುವಂತಹ ಕಾರ್ಯವಾಗಿದೆ.

ಪ್ರತಿಯೊಬ್ಬರೂ ಮನೆಗೊಂದು ಮರವನ್ನು ಬೆಳೆಸಿದರೆ ಸಾಲು ಮರದ ತಿಮ್ಮಕ್ಕ ಅವರ ಆಶಯವನ್ನು ಈಡೇರಿಸಿದಂತಾಗುತ್ತದೆ.ಮಕ್ಕಳಿಗೆ ಶಿಕ್ಷಣದ ಜೊತೆಗೆ ಪರಿಸರ ಜಾಗೃತಿ ಕೂಡಾ ಅಷ್ಟೇ ಮುಖ್ಯವಾಗಿದೆ. ಮಲೆನಾಡಿನ ಬದುಕೇ ಹಚ್ಚ ಹಸಿರಾಗಿರುತ್ತದೆ ಆ ಭಾಗದಲ್ಲಿ ಹಸಿರಿನ ವಾತಾವರಣ ನೋಡಲಿಕ್ಕೆ ಹೋಗುತ್ತೇವೆ ಆದರೆ ನಮ್ಮ ಭಾಗದಲ್ಲಿ ಅದೇರೀತಿ ವಾತಾವರಣ ನಿರ್ಮಾಣ ಮಾಡುವ ಗುರಿಯನ್ನು ನಾವೆಲ್ಲರೂ ಹೊಂದಬೇಕು ಎಂದರು.

## ಹತ್ತಿಯಲ್ಲಿ ಗುಲಾಬಿ ಕಾಯಿ ಕೊರಕದ ಸಮಗ್ರ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ




ಯುವಮಾರ್ಗ ಸುದ್ದಿ

**ಮಾನ್ವಿ,ನ,19–**ತಾಲೂಕಿನ ಕುರ್ಡಿ ಗ್ರಾಮದ ವೃತ್ತದಲ್ಲಿನ ಪ್ರಗತಿ ಪರ ರೈತ ವೆಂಕಟೇಶರೆಡ್ಡಿ ರವರ ಜಮೀನಿನಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಕುರ್ಡಿ ರೈತ ಸಂಪರ್ಕ ಕೇಂದ್ರ ಸಂಯುಕ್ತಾಶ್ರಯದಲ್ಲಿ ನಡೆದ ಹತ್ತಿ ಕಟ್ಟಿಗೆ ಛೇದಕ ಯಂತ್ರದ ಪ್ರಾತ್ಯಕ್ಷಿಕೆ ಹಾಗೂ ಹತ್ತಿಯಲ್ಲಿ ಗುಲಾಬಿ ಕಾಯಿ ಕೊರಕದ ಸಮಗ್ರ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ ಕುರಿತು ನಡೆದ ಕಾರ್ಯಕ್ರಮದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ.ತಿಮ್ಮಣ್ಣ ಮಾತನಾಡಿ ಅಖಿಲ ಭಾರತ ಹತ್ತಿ ಸಂಶೋಧನ ಕೇಂದ್ರ ನಾಗಪುರ್ ವತಿಯಿಂದ ಕೃಷಿ ವಿಜ್ಞಾನ ಕೇಂದ್ರಕ್ಕೆ ಅತಿ ಸಾಂದ್ರತೆ ಹತ್ತಿ ಬೆಳೆ ವಿಧಾನದ ಕುರಿತು ಪರಿಶೀಲನೆಗಾಗಿ ರಾಜ್ಯದ ರಾಯಚೂರು ಕೃಷಿ ವಿಜ್ಞಾನ ಕೇಂದ್ರ ಹಾಗೂ ಧಾರವಾಡ ಕೃಷಿ ವಿಜ್ಞಾನ ವಿಶ್ವವಿದ್ಯಾಲಯಕ್ಕೆ ಯೋಜನೆಯನ್ನು ನೀಡಿದ್ದು ಈ ಅಧಿಕ ಸಾಂದ್ರತೆ ಹತ್ತಿ ಬೆಳೆ ಪದ್ದತಿಯಲ್ಲಿ ಅಧಿಕ ಸಾಂದ್ರತೆ ಹತ್ತಿ ಬೆಳೆ ಪದ್ದತಿಗೆ ಸೂಕ್ತವಾದ ಹತ್ತಿ ಬೀಜಗಳನ್ನು ಗಿಡದಿಂದ ಗಿಡಕ್ಕೆ 150 ಸೆ,ಮಿ. ಹತ್ತಿರದಲ್ಲಿ ಬೀಜಗಳನ್ನು ನಾಟಿ ಮಾಡುವುದರಿಂದ 120 ದಿನಗಳಲ್ಲಿ ಹತ್ತಿ ಬೆಳೆಯಲ್ಲಿ ಎರಡು ಬಾರಿ ಹತ್ತಿಯನ್ನು ಬಿಡಿಸಿಕೊಳ್ಳಬಹುದು ಕಡಿಮೆ ಸಮಯದಲ್ಲಿ ಹತ್ತಿ ಬೆಳೆ ಅವಧಿ ಮುಗಿಯುವುದರಿಂದ ಹತ್ತಿ ಬೆಳೆಯಲ್ಲಿ ಗುಲಾಬಿ ಕಾಯಿಕೊರಕಾದ ಬಾದೆಯನ್ನು ತಪ್ಪಿಸಬಹುದು. ಈ ಪದ್ದತಿಯಲ್ಲಿ ಬೆಳೆದ ಹತ್ತಿ ಬೆಳೆಗೆ ಚಾಮತ್ಕರ ದ್ರಾವಣವನ್ನು ಸಿಂಪಡಿಸಿ ಹತ್ತಿಗಿಡ ಎತ್ತರ ಬೆಳೆಯುವುದನ್ನು ತಡೆಯುವುದರಿಂದ ಬೆಳೆಗೆ ನಾವು ನೀಡುವ ಎಲ್ಲಾ ಪೋಷಕಾಂಶಗಳು ಸಮಗ್ರವಾಗಿ ಹತ್ತಿ ಗಿಡಕ್ಕೆ ತಲುಪಿ ಹೆಚ್ಚು ಗುಣಮಟ್ಟದ ಹತ್ತಿ ಕಾಯಿಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ,ಹತ್ತಿ ಬೆಳೆಗೆ ನೀಡುವ ನೀರಿನ ಹಾಗೂ ಗೊಬ್ಬರ,ಸಮಯದ ಉಳಿತಾಯವಾಗುವುದರೊಂದಿಗೆ ಕಳೆದ ಬಾರಿ ರೈತ ವೆಂಕಟರೆಡ್ಡಿಯವರು ಎಕರೆಗೆ 18 ಕ್ವಿಂಟಾಲ್ ವರೆಗೆ ಕಡಿಮೆ ಕೃಷಿ ವೆಚ್ಚದಲ್ಲಿ ಹೆಚ್ಚಿನ ಇಳುವರಿಯನ್ನು ಪಡೆದಿರುವುದನ್ನು ಕಾಣಬಹುದಾಗಿದೆ ಮುಂದಿನ ಬೆಳೆಗಳಾದ ಕಡ್ಲೆ ,ಸೇರಿದಂತೆ ವಿವಿಧ ಬೆಳೆಗಳನ್ನು ಪಡೆಯಬಹುದು. ಈ ಪದ್ದತಿ ಅಳವಡಿಸಿಕೊಳ್ಳುವ ರೈತರಿಗೆ ಎಕರೆಗೆ 4 ಸಾವಿರದವರೆಗೆ ಸಹಾಯಧಾನ ಕೂಡ ದೊರೆಯುತ್ತದೆ. ರೈತರು ಹತ್ತಿಬೆಳೆಯಲ್ಲಿ ಹತ್ತಿ ಇಳುವರಿಯನ್ನು ಪಡೆದನಂತರ ಉಳಿಯುವ ಹತ್ತಿ ಕಟ್ಟಿಗೆ ತ್ಯಾಜ್ಯವನ್ನು ಬೆಂಕಿ ಇಟ್ಟು ಸುಡುವುದರಿಂದ ಭೂಮಿಯಲ್ಲಿರುವ ಬೆಳೆಗಳಿಗೆ ಉಪಕಾರಿಯಾಗಿರುವ ಅನೇಕ ಸೂಕ್ಷ್ಮ ಜೀವಿಗಳು **(2ನೇಪುಟಕ್ಕೆ...)**

## ಮೊದಲನೇಯ ಪುಟದಿಂದ

# ಹತ್ತಿಯಲ್ಲಿ ಗುಲಾಬಿ ಕಾಯಿ ಕೊರಕದ ಸಮಗ್ರ ನಿರ್ವಹಣೆ ಕುರಿತು ಮುಂಚೂಣಿ ಪ್ರಾತ್ಯಕ್ಷಿಕೆ

ನಾಶವಾಗುತ್ತವೆ ಹಾಗೂ ಪರಿಸರದಲ್ಲಿ ಇಂಗಾಲದ ಡೈ ಆಕ್ಸೈಡ್ , ಮೋನಾಕ್ಸಯಡ್ ಹೆಚ್ಚಿನ ಪ್ರಮಾಣದಲ್ಲಿ ಸೇರಿ ವಾಯು ಮಾಲಿನ್ಯ ಉಂಟಾಗುವುದರಿಂದ ಅನೇಕ ಶ್ವಾಸಕೋಶ ಕ್ಯಾನ್ಸರ್ ರೋಗಗಳು ಉಂಟಾಗುತ್ತವೆ ಅದ್ದರಿಂದ ರೈತರು ಹತ್ತಿ ಛೇದಕಗಳನ್ನು ಬಳಸಿ ಹತ್ತಿ ಕಟ್ಟಿಗೆಯನ್ನು ಪುಡಿ ಮಾಡಿ ಮರಳಿ ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತಾತೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.ಕುರ್ಡಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಡಾ.ಶಿವಶಂಕರ ಮಾತನಾಡಿ ಕೃಷಿ ಇಲಾಖೆಯಿಂದ ರೈತರಿಗೆ ಅಧುನಿಕ ಯಂತ್ರಿಕೃತ ಕೃಷಿಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಸಹಾಯಧನದಡಿಯಲ್ಲಿ ಖರೀದಿ ಮಾಡುವುದಕ್ಕೆ ಅವಕಾಶವಿದೆ ,ರೈತರಿಗೆ ಅಗತ್ಯವಿರುವ ಕೃಷಿ ಪರಿಕಾರಗಳು ಹಾಗೂ ಕೃಷಿ ಕುರಿತು ಅಗತ್ಯ ಮಾಹಿತಿಯನ್ನು ರೈತರು ಪಡೆದುಕೊಂಡು ಕಡಿಮೆ ಕೃಷಿ ವೆಚ್ಚದಲ್ಲಿ ಅಧಿಕ ಇಳುವರಿಯನ್ನು ಪಡೆಯುವ ಮೂಲಕ ರೈತರು ತಮ್ಮ ಕೃಷಿ ಅದಾಯದವನ್ನು ದ್ವಿಗುಣ ಮಾಡಿಕೊಳ್ಳುವಂತೆ ತಿಳಿಸಿದರು.ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕೀಟಶಾಸ್ತ್ರಜ್ಞರಾದ ಡಾ.ಶ್ರೀವಾಣಿ ರೈತರಿಗೆ ಗುಲಾಬಿ ಕಾಯಿಕೊರಕದ ಸಮಗ್ರ ನಿರ್ವಹಣೆ ಕುರಿತು ಅಗತ್ಯ ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನಿಗಳಾದ ಡಾ.ಉಮೇಶ, ಡಾ.ಆಸ್ಸನ, ಕುರ್ಡಿ ರೈತ ಸಂಪರ್ಕ ಕೇಂದ್ರದ ಅತ್ಮಯೋಜನೆಯ ಕೃಷಿ ತಾಂತ್ರಿಕ ವ್ಯವಸ್ಥಾಪಕರಾದ ಫಯಾಜ್ ಜಾಲಾಲ್, ಹುಲಿಗೆಪ್ಪ, ಲಕ್ಷ??ಣ ಗೋರ್ಕಾಲ್, ಕೃಷಿ ಸಖೀ ದೇವಮ್ಮ , ಗ್ರಾಮದ ರೈತರಾದ ಮನೋಜಗೌಡ, ಮಾರೇಶ, ಯಲ್ಲಪ್ಪ ಸೇರಿದಂತೆ ನೂರಾರು ರೈತರು ಭಾಗವಹಿಸಿ ಕೃಷಿ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು.

## ಕಾಂಗ್ರೆಸ್ ಪಕ್ಷ ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ : ಶಾಸಕ ಆರ್. ಬಸನಗೌಡ

ವಲಯ ಮೇಲ್ವಿಚಾರಕರಾದ ಮೌನೇಶ್, ಪ್ರಕಾಶ್, ನರೇಗಾ ಯೋಜನೆಯ ತಾಂತ್ರಿಕ ಸಂಯೋಜಕರಾದ ಅಶೋಕ್, ತಾಂತ್ರಿಕ ಸಹಾಯಕ ಅಭಿಯಂತರರಾದ ಪಂಪಣ್ಣ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು, ಗ್ರಾಪಂ ಸಿಬ್ಬಂದಿ ಇದ್ದರು. ಮಸ್ಕಿ ತಾಪಂ ಸಹಾಯಕ ನಿರ್ದೇಶಕರಾದ (ಪಂ.ರಾ) ಸೋಮನಗೌಡ ಪಾಟೀಲ್ ನಿರೂಪಿಸಿದರು. ಆಶಾ ಕಾರ್ಯಕರ್ತೆ ಮರಿಯಮ್ಮ ಪ್ರಾರ್ಥಿಸಿದರು.ಆರೋಗ್ಯ ಉಚಿತ ತಪಾಸಣೆ ಶಿಬಿರ : ಮೆದಕಿನಾಳ ಪ್ರಾಥಮಿಕ ಆರೋಗ್ಯ ಕೇಂದ್ರ, ಜಕ್ಕೇರಮಡು ಆರೋಗ್ಯ ಉಪ ಕೇಂದ್ರ, ಮಟ್ಟೂರು ಗ್ರಾಮದ ಸರ್ಕಾರಿ ಆಯುರ್ವೇದ ಕೇಂದ್ರದ ವೈದ್ಯಾಧಿಕಾರಿಗಳು, ಸಿಬ್ಬಂದಿ ಸಾರ್ವಜನಿಕರ ಆರೋಗ್ಯ ತಪಾಸಣೆ ನಡೆಸಿದರು. ರಕ್ತದೊತ್ತಡ, ಸಕ್ಕರೆ ಕಾಯಿಲೆ ತಪಾಸಣೆ ನಡೆಸಿ ಉಚಿತವಾಗಿ ಔಷಧ ವಿತರಿಸಿದರು. ಡಾ.ಮಹೇಂದ್ರ ಪಾಟೀಲ್, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಕಿರಣ್, ಬಸವರಾಜ್, ಸಮುದಾಯ ಆರೋಗ್ಯ ಅಧಿಕಾರಿಗಳಾದ ಸುರೇಶ್, ಅಶೋಕ್, ಮೀನಾಕ್ಷಿ, ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿ ವಿಜಯಲಕ್ಷ್ಮೀ, ಮಟ್ಟೂರು ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಡಾ. ಡಿ.ಎಚ್.ಹುಲ್ಲೂರು, ಗೋರೇಬಾಳ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಡಾ. ಹೀರಾಬಾಯಿ, ಲಿಂಗಮ್ಮ, ಗಾಯತ್ರಿ, ನಂದಕಿಶೋರ್, ಶ್ರೀನಿವಾಸ್ ಸೇರಿದಂತೆ ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು.

# ಕಾಲ್ತುಳಿತಕ್ಕೆ ಆರ್‌ಸಿಬಿ ಹೊಣೆ

ತನಿಖೆ ವೇಳೆ ಆರ್‌ಸಿಬಿ, ಡಿಎನ್‌ಎ, ಕೆಎಸ್‌ಸಿಎ ವಿರುದ್ಧ ಹಲವು ಸಾಕ್ಷ್ಯಗಳನ್ನು ಉಲ್ಲೇಖಿಸಿ ನ್ಯಾಯಾಲಯಕ್ಕೆ 2,200 ಕ್ಕೂ ಪುಟಗಳ ಚಾರ್ಜ್‌ಶೀಟ್ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ.ಆರ್‌ಸಿಬಿ ಜೊತೆ ಕೆಎಸ್‌ಸಿಎ,ಡಿಎನ್‌ಎ ಕಾಲ್ತುಳಿತಕ್ಕೆ ನೇರ ಹೊಣೆಯಾಗಿದ್ದು, ಚಾರ್ಜ್‌ಶೀಟ್‌ನಲ್ಲಿ ಮೂರು ಸಂಸ್ಥೆಗಳನ್ನು ಸಿಐಡಿ ನೇರ ಹೊಣೆ ಮಾಡಿ ಸರಿಯಾದ ಪ್ಲಾನ್ ಇಲ್ಲದೆಯೇ ಕಾರ್ಯಕ್ರಮ ಆಯೋಜಿಸಲಾಗಿತ್ತು. ಠರಾವೋ ಸರಿಯಾಗಿ ಮಾಡಿಲ್ಲ ಎನ್ನುವುದು ತನಿಖೆ ವೇಳೆ ಪತ್ತೆಯಾಗಿದೆ.

# ದತ್ತಿ ಉಪನ್ಯಾಸಗಳು ಕನ್ನಡ ಭಾಷೆ, ಸಾಹಿತ್ಯದ ಬೆಳವಣಿಗೆಗೆ ನಾಂದಿಯಿದ್ದಂತೆ : ಸಿದ್ದಲಿಂಗಪ್ಪ ವಕೀಲ

ಪರಿಷತ್ತಿನ ಖಾಯಂ ವಾರ್ಷಿಕ ಕಾರ್ಯಕ್ರಮಗಳಿಗೆ ಮೂಲಾಧಾ ರವೆಂದರೆ ದತ್ತಿನಿಧಿಗಳು. ಪ್ರತಿಯೊಬ್ಬರು ಅತಿ ಹೆಚ್ಚಿನ ಸಂಖ್ಯೆಯಲ್ಲಿದತ್ತಿಗಳನ್ನು ನೀಡುವ ಮೂಲಕ ಕನ್ನಡದ ಸಾಹಿತ್ಯದ ಬಲವರ್ಧನೆಗೆ ಕಾರಣರಾಗಬೇಕಿದೆ ಎಂದರು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಾಕಸಾಪ ಅಧ್ಯಕ್ಷ ಶರಣಬಸವ ನೀರಮಾನ್ವಿ ಅವರು ದತ್ತಿನಿಧಿ ಯೋಜನೆ ಮೊದಲು ಕಾರ್ಯರೂಪಕ್ಕೆ ಬಂದದ್ದು 1935 ರಲ್ಲಿ ಪರಿಷತ್ತಿನ ಅಧ್ಯಕ್ಷರಲ್ಲಿ ಒಬ್ಬರಾದ ಬಿ. ಎಂ. ಶ್ರೀ. ಅವರಿಂದ ಮೊದಲ ದತ್ತಿ ಬಂದದ್ದು ದತ್ತಿ ದಾನಿಗಳು ತಮಗೆ ಇಷ್ಟವೆನಿಸಿದವರ ಹೆಸರಿನಲ್ಲಿ ದತ್ತಿ ನೀಡಬಹುದು ಎಂದರು.

ದತ್ತಿಯ ಮೊಬಲಗು 25 ಸಾವಿರ ರೂ. ಇದ್ದು ದತ್ತಿಗೆ ನೀಡಿದ ಹಣಕ್ಕೆ ಪರಿಷತ್ತಿನ ಅಧಿಕೃತ ರಸೀದಿ ಕೊಡಲಾಗುವುದು. ದತ್ತಿ ಸ್ವೀಕಾರವಾದುದಕ್ಕೆ ಅಧಿಕೃತ ಅಂಗೀಕಾರ ಪತ್ರ ನೀಡಲಾಗುವುದು. ದಾನಿಗಳು ನೀಡಿದ ದತ್ತಿ ಹಣವನ್ನು ಪರಿಷತ್ತಿನ ಹೆಸರಿನಲ್ಲಿ ಅಧಿಕೃತ ಬ್ಯಾಂಕಿನಲ್ಲಿ ಶಾಶ್ವತ ಠೇವಣಿಯಲ್ಲಿಡಲಾಗುವುದು. ದತ್ತಿ ಮೊತ್ತದಿಂದ ಬರುವ ಬಡ್ಡಿಯ ಹಣದಿಂದ ದಾನಿಗಳ ಆಶಯದಂತೆ ಪ್ರತಿವರ್ಷ ಸಾಹಿತ್ಯ ಕಾರ್ಯಕ್ರಮ ನಡೆಸಿಕೊಂಡು ಬರಲಾಗುವುದು. ಈ ಕಾರ್ಯಕ್ರಮಕ್ಕೆ ದತ್ತಿ ಮೊತ್ತದ ಬಡ್ಡಿ ಹಣ ಸಾಲದಾಗುವ ಸಂದರ್ಭಗಳಲ್ಲಿ ಎರಡು ಮೂರು ದತ್ತಿಗಳನ್ನು ಸೇರಿಸಿ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ತಿಳಿಸಿದ ಶರಣಬಸವ ನೀರಮಾನ್ವಿ ಅವರು ಪರಿಷತ್ತಿಗೆ ಹೊಸದಾಗಿ ದತ್ತಿಗಳನ್ನು ದೇಣಿಗೆ ನೀಡಿದ ರಾಜಾಮಹೇಂದ್ರನಾಯಕ, ಸಿದ್ದಲಿಂಗಪ್ಪ ವಕೀಲ ಚಿಕ್ಕಕೊಟ್ನೆಕಲ್, ಆರ್.ಮುತ್ತುರಾಜಶೆಟ್ಟಿ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಕ್ಷಕ ಮಹೆಬೂಬ ಪಾಷಾ ಅವರು ಅಮರಗುಂಡಯ್ಯ ಸ್ವಾಮಿ ಹಿರೇಮಠ ಸ್ಮಾರಕ ದತ್ತಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶೈಕ್ಷಣಿಕ ಸಮಸ್ಯೆ, ಪರಿಹಾರ ಮತ್ತು ಜಾಗೃತಿ ಕುರಿತು ಹಾಗೂ ಶಿಕ್ಷಕ ಸಂಗಮೇಶ ಮುಧೋಳ ಅವರು ವೆಂಕಮ್ಮ ಸ್ಮಾರಕ ದತ್ತಿ ಶಿಕ್ಷಣ ಮತ್ತು ಸ್ವಾತಂತ್ರ್ಯ ಕುರಿತು ಉಪನ್ಯಾಸ ನೀಡಿದರು.

**ಸನ್ಮಾನ :** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಆಯ್ಕೆಯಾಗಿರುವ ಜಿಲ್ಲಾ ಕಾರ್ಯದರ್ಶಿ ಬಸವರಾಜ ಭೋಗಾವತಿ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಲಕ್ಷ್ಮಣ್ ಕಪಗಲ್, ತಾಯಪ್ಪ ಬಿ.ಹೊಸೂರು ಹಾಗೂ ಪರಿಸರ ಜಾಗೃತಿ ಪ್ರಶಸ್ತಿ ಪುರಸ್ಕೃತ ಸಲ್ಲಾವುದ್ದೀನ್, ದತ್ತಿ ದಾನಿ ಶಾಂತಸ್ವಾಮಿ ಹಿರೇಮಠ ಹಿರೇಕೊಟ್ನೆಕಲ್, ಹೊಸದಾಗಿ ದತ್ತಿಗಳನ್ನು ದೇಣಿಗೆ ನೀಡಿದ ರಾಜಾಮಹೇಂದ್ರನಾಯಕ, ಸಿದ್ದಲಿಂಗಪ್ಪ ವಕೀಲ ಚಿಕ್ಕಕೊಟ್ನೆಕಲ್, ಆರ್.ಮುತ್ತುರಾಜಶೆಟ್ಟಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.ತಾಕಸಾಪ ನಿಕಟಪೂರ್ವ ಅಧ್ಯಕ್ಷ ಮೂಕಪ್ಪ ಕಟ್ಟಿಮನಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಈ ಸಂದರ್ಭದಲ್ಲಿ ಸರ್ವೋದಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮನೋಜಕುಮಾರ ಮಿಶ್ರಾ, ತಾಖಾಶಿಓ ಅಧ್ಯಕ್ಷ ಹೆಚ್.ಶರ್ಫುದ್ದೀನ್ ಪೋತ್ನಾಳ, ಆರ್.ಮುತ್ತುರಾಜಶೆಟ್ಟಿ, ದತ್ತಿ ದಾನಿ ಶಾಂತಸ್ವಾಮಿ ಹಿರೇಮಠ ಹಿರೇಕೊಟ್ನೆಕಲ್, ಕರವೇ ಅಧ್ಯಕ್ಷ ಡಿ.ಬಸನಗೌಡ, ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯದರ್ಶಿ ಬಸವರಾಜ ಭೋಗಾವತಿ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಲಕ್ಷ್ಮಣ್ ಕಪಗಲ್, ತಾಯಪ್ಪ ಬಿ.ಹೊಸೂರು, ಸಲ್ಲಾವುದ್ದೀನ್, ಪ್ರಾಚಾರ್ಯೆ ರೇಣುಕಾ, ಉಪನ್ಯಾಸಕಿ ಶ್ರಾವಣಿ ಇದ್ದರು.ಕಸಾಪ ಗೌರವ ಕಾರ್ಯದರ್ಶಿ ಲಕ್ಷ್ಮಣ ಜಾನೇಕಲ್ ನಿರೂಪಿಸಿದರು.ರವಿಶರ್ಮಾ ಜಾನೇಕಲ್ ಸ್ವಾಗತಿಸಿದರು.ಪ್ರಾಧ್ಯಾಪಕ ಚನ್ನಬಸವ ಮಾಡಗಿರಿ ವಂದಿಸಿದರು.

# ಕಾಲ ಮಿತಿಯೊಳಗೆ ಮೇಕೆದಾಟು ವಿಸ್ತೃತ ಯೋಜನಾ ವರದಿ ಸಲ್ಲಿಕೆ : ಡಿಕೆಶಿ



**ಬೆಂಗಳೂರು, ನ.19–** ಮೇಕೆದಾಟು ಯೋಜನೆಗೆ ವಿಸ್ತೃತ ಯೋಜನಾ ವರದಿಯನ್ನು ಪರಿಷ್ಕರಣೆ ಮಾಡಿ ಕಾಲಮಿತಿಯ ಒಳಗಾಗಿಯೇ ಸಲ್ಲಿಸುವುದಾಗಿ ಜಲ ಸಂಪನೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೇಕೆದಾಟು ಯೋಜನೆಗೆ ಹೊಸದಾಗಿ ವಿಸ್ತೃತ ಯೋಜನಾ ವರದಿ ಸಿದ್ಧಗೊಳಿಸಲು ಸಾಧ್ಯವಿಲ್ಲ, ಇರುವ ಡಿಪಿಆರ್ ಅನ್ನೆ ಪರಿಷ್ಕರಣೆ ಮಾಡಿ ಮರುಸಲ್ಲಿಕೆ ಮಾಡಲಾಗುವುದು. ಈ ಹಿಂದೆ ಡಿಪಿಆರ್ ಸಲ್ಲಿಸಿದ್ದಾಗ ಇದ್ದ ದರಗಳಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಪ್ರಸ್ತುತ ದರಕ್ಕೆ ಅನುಗುಣವಾಗಿ ಯೋಜನಾ ವರದಿಯನ್ನು ತಯಾರಿಸಲಾಗುವುದು ಎಂದರು.

ಹಿಂದಿನ ಯೋಜನಾ ವರದಿಗೆ ವ್ಯಕ್ತವಾಗಿರುವ ಆಕ್ಷೇಪಣೆಗಳನ್ನು ಪರಿಗಣಿಸಿ ಸ್ಪಷ್ಟನೆ ನೀಡುವ ಮೂಲಕ ಎಲ್ಲಾ ಲೋಪಗಳನ್ನು ಸರಿಪಡಿಸಿ ಡಿಪಿಆರ್ ಪರಿಷ್ಕರಿಸುವುದಾಗಿ ಹೇಳಿದರು.

ತಮ ವಿಷಯದಲ್ಲಿ ರಾಜಕೀಯ ಸ್ಥಾನಮಾನ ಕುರಿತಂತೆ ಮಾತನಾಡುವವರು ಮಾತನಾಡಲಿ, ಖುಷಿ ಪಡುವವರು ಖುಷಿ ಪಡಲಿ, ದುಃಖ ಪಡುವವರು ದುಃಖವಾಗಿರಲಿ, ಅವರ ಇಚ್ಛೆಯಂತೆ ಇರಲಿ, ನನ್ನ ವಿಚಾರವಾಗಿ ವ್ಯಾಪಕ ಚರ್ಚೆಗಳಾಗುತ್ತಿವೆ. ಜನರಿಗೆ ಖುಷಿಯಾಗುತ್ತಿದೆ, ತಮಗೆ ಜನರ ಸಂತೋಷವೇ ಮುಖ್ಯ ಎಂದು ವ್ಯಂಗ್ಯವಾಗಿ ಹೇಳಿದರು.

ಸಕ್ಕರೆಯ ಬೆಲೆ ಕಳೆದ 10 ವರ್ಷಗಳಿಂದ ಏರಿಕೆಯಾಗಿಲ್ಲ. ಹೀಗಾಗಿ ಪ್ರತಿ ಟನ್‌ಗೆ ರಾಜ್ಯ ಸರ್ಕಾರ ನಿಗದಿ ಪಡಿಸಿದಂತೆ 300 ರೂಪಾಯಿ ನೀಡಲಾಗುವುದಿಲ್ಲ ಎಂದು ಸಕ್ಕರೆ ಕಾರ್ಖಾನೆಗಳ ಮಾಲೀಕರು ಗಲಾಟೆ ಮಾಡುತ್ತಿದ್ದಾರೆ. ರೈತರಿಗೂ ತೊಂದರೆಯಾಗಬಾರದು, ಕಾರ್ಖಾನೆಗಳಿಗೂ ನಷ್ಟವಾಗಬಾರದು ಎಂದರು.

ಕಾರ್ಖಾನೆಗಳಿದ್ದರೆ ರೈತರು, ರೈತರಿದ್ದರೆ ಕಾರ್ಖಾನೆಗಳು. ಉದ್ಯಮ ಕೂಡ ಬೆಳೆಯಬೇಕು. ಈ ನಿಟ್ಟಿನಲ್ಲಿ ಸಕ್ಕರೆ ಖರೀದಿ ದರ, ಮೊಲಾಸಿಸ್ ಹಾಗೂ ವಿದ್ಯುತ್ ಖರೀದಿ ಸೇರಿದಂತೆ ಎಲ್ಲಾ ವಿಚಾರಗಳನ್ನು ತೀರ್ಮಾನ ಮಾಡುವುದು ಕೇಂದ್ರ ಸರ್ಕಾರ. ಈ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಬೇಡಿಕೆಗಳನ್ನು ಮಂಡಿಸಿದ್ದಾರೆ ಎಂದು ಹೇಳಿದರು.

ಬ್ಯಾಂಕುಗಳ ಬಡ್ಡಿ ದರದ ಬಗ್ಗೆ ಕೂಡ ಸಕ್ಕರೆ ಕಾರ್ಖಾನೆಗಳ ಮಾಲೀಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅದನ್ನು ನಿರ್ಧರಿಸುವುದು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಆರ್‌ಬಿಐ ಎಲ್ಲ ವಿಚಾರಗಳಿಗೆ ನ್ಯಾಯ ದೊರಕಿಸಿ ಕೊಡಬೇಕಿದೆ. ಪ್ರತಿಭಟನೆಯ ಬಿಸಿ ಬಿಜೆಪಿಯವರಿಗೂ ತಟ್ಟಿದಂತಿದೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸಕ್ಕರೆ ಬೆಲೆ ಹೆಚ್ಚಳ ಮಾಡುವುದಾಗಿ ಹೇಳಿರುವುದರಿಂದ ಕೇಂದ್ರ ಸರ್ಕಾರ ಶೀಘ್ರ ನಿರ್ಧಾರ ಕೈಗೊಳ್ಳಬಹುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

# ವೃಕ್ಷಮಾತೆ ಸಾಲುಮರದ ತಿಮ್ಮಕ್ಕನವರಿಗೆ ಭಾವಪೂರ್ಣ ಶ್ರದ್ಧಾಂಜಲಿ: ಪರಿಸರ ಜಾಗೃತಿಗೆ ಕರೆ!



**ಯುವಮಾರ್ಗ ಸುದ್ದಿ**

**ದೇವದುರ್ಗ,ನ.19–** "ಗಾಂಧಾರಿಗೆ ಜನಿಸಿದ ನೂರು ಮಕ್ಕಳಿಗಿಂತ ಸಾಲುಮರದ ತಿಮ್ಮಕ್ಕನೆಟ್ಟ ನೂರು ಸಸಿಗಳು ಲೇಸು" ಎಂದು ಕೌಟಿಲ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಬಸವರಾಜ್ ಕೊಪ್ಪರ ಅವರು ನುಡಿದರು. ಜ್ಞಾನವಿಲ್ಲದಿದ್ದರೂ ವಿಜ್ಞಾನಿಗಳಿಗೆ ಸರಿಸಮಾನವಾಗಿ ನಿಂತು, 'ಹಸಿರೇ ಉಸಿರು' ಎಂದು ಸಾವಿರಾರು ಮರಗಳನ್ನು ತನ್ನ ಮಡಿಲಲ್ಲಿ ಜನಿಸಿದ ಮಕ್ಕಳಂತೆ ಪೋಷಿಸಿದ ಈ ನಾಡು ಕಂಡ ಶ್ರೇಷ್ಠ ಪರಿಸರ ಹೋರಾಟಗಾರ್ತಿ ಸಾಲುಮರದ ತಿಮ್ಮಕ್ಕನವರನ್ನು ನಾವು ಕಳೆದುಕೊಂಡಿರುವುದು ಬಹಳ ವಿಷಾದನೀಯ ಸಂಗತಿ ಎಂದು ಅವರು ತಮ್ಮ ಮಾತನ್ನು ಮುಂದುವರೆಸಿದರು.

ಪಟ್ಟಣದ ಜಾಲಹಳ್ಳಿ ಮುಖ್ಯ ರಸ್ತೆ ಇಂದಿರಾನಗರದ ನಿಸರ್ಗ ಗ್ಲೋಬಲ್ ಆಂಗ್ಲ ಮಾಧ್ಯಮ ಶಾಲೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ ಆವರಣದಲ್ಲಿ ಹಮ್ಮಿಕೊಂಡಿದ್ದ ಭಾವಪೂರ್ಣ ಶ್ರದ್ಧಾಂಜಲಿ ಸಭೆಯನ್ನು ಉದ್ದೇಶಿಸಿ ಸಂಸ್ಥೆಯ ಅಧ್ಯಕ್ಷರಾದ ಬಸವರಾಜ್ ಕೊಪ್ಪರ್ ಅವರು ಮಾತನಾಡಿದರು. ವಿದ್ಯಾರ್ಥಿಗಳೊಂದಿಗೆ ಜೊತೆಗೂಡಿ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕನವರಿಗೆ ಅತ್ಯಂತ ವಿನಮ್ರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.ಸಾಲುಮರದ ತಿಮ್ಮಕ್ಕನವರ ಸಾಮಾಜಿಕ ಸೇವೆ, ಈ ನಾಡಿಗೆ ಅವರ ಕೊಡುಗೆ, ನಿಸರ್ಗದ ಬಗ್ಗೆ ಅವರ ಕಳಕಳಿ ಹಾಗೂ ಪರಿಸರದ ಜಾಗೃತಿ ಕುರಿತು ಮಾತನಾಡಿದ ಅವರು, ನಾವು ಪರಿಸರದ ಒಂದು ಭಾಗ, ಪರಿಸರ ನಮ್ಮ ಒಂದು ಭಾಗವಲ್ಲ ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕು. "ಮನೆಗೊಂದು ಮಗು, ಮಗುವಿಗೊಂದು ಮರ, ಊರಿಗೊಂದು ವನ" ಎಂಬಂತೆ ಬದುಕಬೇಕು ಎಂದು ಹೇಳಿದರು. ಗಾಂಧಾರಿಗೆ ಜನಿಸಿದ ನೂರು ಮಕ್ಕಳಿಗಿಂತ ಸಾಲುಮರದ ತಿಮ್ಮಕ್ಕನೆಟ್ಟ ನೂರು ಸಸಿಗಳು ಲೇಸು ಎನ್ನುವ ಅಮರವಾಣಿಯನ್ನು ನಾವು ಯಾರು ಮರೆಯಬಾರದು. ಪ್ರತಿ ಮಕ್ಕಳೂ ಸಾಲುಮರದ ತಿಮ್ಮಕ್ಕನವರ ಜೀವನದ ಶೈಲಿ, ಅವರ ಬದುಕು, ಬಡತನದಲ್ಲಿ ಮರಗಳನ್ನ ನೆಟ್ಟ ರೀತಿ, ಮತ್ತು ಈ ಸಮಾಜ ಸೇವೆಗಾಗಿ ಅವರಿಗೆ ದೊರೆತ ಅನೇಕ ಪ್ರಶಸ್ತಿ ಮತ್ತು ಪಾರಿತೋಷಕಗಳ ಕುರಿತು ತಿಳಿಸಿದರು.

ಇಂದು ಈ ಶಿಕ್ಷಣ ಸಂಸ್ಥೆಯಲ್ಲಿ ನೂರಾರು ಮರಗಳನ್ನು ನೆಡಲು ನನಗೆ ಆದರ್ಶ ಮತ್ತು ಪ್ರೇರಣೆ ಎಂದರೆ ತಿಮ್ಮಕ್ಕನವರೇ ಎಂದು ಅತ್ಯಂತ ಭಾವುಕರಾಗಿ ತಿಳಿಸಿದರು. "ಒಂದು ಮರವನ್ನು ನೆಡಿ ಸಾವಿರ ಜನಕ್ಕೆ ಹಣ್ಣು ಮತ್ತು ನೆರಳನ್ನು ನೀಡಬಲ್ಲದು, ತುಳಿದು ಮಣ್ಣಾಗಿಸಬೇಡ ಬೆಳೆಸು ಮರವಾಗುವೆ ನಿನಗೆ ನಾಳೆ ನೆರಳಗಾವೆ" ಎನ್ನುವ ಪರಿಸರದ ನುಡಿಗಳು ಪ್ರತಿಯೊಬ್ಬರ ಜೀವನದಲ್ಲಿ ಗಿಡಮರಗಳ ಬಗ್ಗೆ ಹಾಗೂ ಪರಿಸರದ ಬಗ್ಗೆ ಜಾಗೃತಿಯನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ವಸುಧಾ ಬಿ., ಶಿಕ್ಷಕರಾದ ಬಸವರಾಜ್ ಉದ್ಬಾಳ, ಸಂಗಮೇಶ ಬಾಗಲಕೋಟೆ, ರಾಜಲಕ್ಷ್ಮಿ, ಚೈತ್ರ ಹೊಸಪೇಟೆ, ಅಮೃತ ಉಂಡೆಕಲ್ ಮತ್ತು ವಿದ್ಯಾರ್ಥಿಗಳು ಉ ಪಸ್ಥಿತರಿದ್ದರು. ಈ ಸಮಯದಲ್ಲಿ ಎಲ್ಲಾ ವಿದ್ಯಾರ್ಥಿಗಳು ಮಂ ತ್ರಮುಗ್ಧರಾಗಿ ವಿಷಯವನ್ನು ಆಲಿಸಿ, "ಹೋಗಿ ಬಾ ತಾಯಿ, ಈ ಭರತ ಕಂಡಿರುವವರೆಗೂ ನಿನ್ನ ಹೆಸರು ಅಮರವಾಗಲಿ" ಎಂದು ತಿಳಿಸಿದರು.

# ಬಾಲಕಾರ್ಮಿಕ ಪದ್ಧತಿ ತೊಲಗಿಸುವಲ್ಲಿ ಸಾರ್ವಜನಿಕರ ಸಹಕಾರ ಅಗತ್ಯ

ಮಕ್ಕಳು ಈ ದೇಶದ ಆಸ್ತಿ ಮಕ್ಕಳ ಸಾರ್ವಂಗಿನ ಅಭಿವೃದ್ಧಿಯೇ ಈ ದೇಶದ ಅಭಿವೃದ್ಧಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಕೈಗೊಂಡರೆ ಮಾತ್ರ ಮಕ್ಕಳ ಶಿಕ್ಷಣ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯ ಸಂಕೇತವಾಗುತ್ತದೆ.

ಉತ್ತಮ ನಾಗರಿಕನಾಗಲು ಅತ್ಯುತ್ತಮ ಅಸ್ತ್ರವೇ ಶಿಕ್ಷಣವೆಂಬುದು ಪಾಲಕರು ಮತ್ತು ಗ್ರಾಮಸ್ಥರು ಶಿಕ್ಷಣ ಪ್ರೇಮಿಗಳು ಸಮುದಾಯ ಆಧಾರಿತ ಮುಖಂಡರು ಅರ್ಥೈಸಿಕೊಂಡು ಯಾವುದೇ ಮಗು ಶಾಲೆ ಯನ್ನ ಬಿಡಿಸದೆ ದಿನನಿತ್ಯ ಶಾಲೆಗೆ ಕಳಿಸುವುದರ ಮೂಲಕ ನಮ್ಮ ಮತ್ತು ಕರ್ನಾಟಕದ ನಾಡಿನಲ್ಲಿ ಬಾಲಕಾರ್ಮಿಕ ಪದ್ಧತಿ ಎಂಬ ಪದ್ಧತಿ ಯನ್ನು ತೊಲಗಿಸಲು ಅದರಿಂದ ನಮ್ಮ ಮಕ್ಕಳು ಹೊರಬಂದು ಭೌತಿಕ ಮಾನಸಿಕ ಶಾರೀರಿಕ ಸಾಮಾಜಿಕ ಮತ್ತು ಭಾಷಾ ಬೆಳವಣಿಗೆಗೆ ತೊಡಕಾಗುವ ಯಾವುದೇ ಚಟುವಟಿಕೆಗಳಲ್ಲಿ ಭಾಗವ ಹಿಸದೆ ಮೂಲಭೂತ ಹಕ್ಕಾಗಿರುವ ಶಿಕ್ಷಣದ ದಿಂದ ವಂಚಿತರಾ ಗದೆ ಅವರೆಲ್ಲರನ್ನು ಮುಖ್ಯವಾಹಿನಿಗೆ ತರುವುದು ನಮ್ಮೆಲ್ಲರ ಪ್ರಮುಖ ಜವಾಬ್ದಾರಿಯಾಗಿದೆ.

ಮಕ್ಕಳನ್ನು ಹೊಲ ಮತ್ತು ಗದ್ದೆಗಳಲ್ಲಿ ಕೂಲಿ ಕೆಲಸಕ್ಕಾಗಿ ಕಳಿಸಬಾರದು ಹಾಗೂ ಗ್ಯಾರೇಜ್ ಹೋಟೆಲ್ ಢಾಬಾ ಮತ್ತು ಬಾರ್ ರೆಸ್ಟೋರೆಂಟ್ ಇತರೆ ಹಲವಾರು ಕ್ಷೇತ್ರಗಳಲ್ಲಿ ದುಡಿಸುವುದರಿಂದ ಮಕ್ಕಳ ದಂಡಿಸುವದು ಹಾಗೂ ಮಕ್ಕಳನ್ನು ದುರುಪಯೋಗ ಬಳಸಿಕೊಳ್ಳುವುದು ಕಾನೂನು ಬಹಿರವಾಗಿ ದ್ದರೂ ಸಹ ನಮ್ಮ ಪಾಲಕರು ಮಕ್ಕಳನ್ನು ಹತ್ತಿ ಮತ್ತು ಭತ್ತ ಹಾಗೂ ಮೆಣಸಿನ ಕಾಯಿ ಹೊಲಗಳಲ್ಲಿ ಕೃಷಿ ಕೆಲಸಕ್ಕೆ ಮಕ್ಕಳನ್ನು ದುಡಿಸುವುದು ಅಪರಾಧವಾಗಿದೆ 18 ವರ್ಷದ ಒಳಗಿನ ಯಾವುದೇ ಮಗು ಶಾಲೆಯ ಅವಧಿಯಲ್ಲಿ ದುಡಿಯು ವುದು ಕಂಡು ಬಂದರೆ ಅಂತಹ ಮಕ್ಕಳನ್ನು ಬಾಲಕಾರ್ಮಿಕರೆಂ ದು ಪರಿಗಣಿಸುವುದು ಅವರನ್ನು ಮುಖ್ಯ ವಾಹಿನಿಗೆ ತರುವುದು ಪ್ರಮುಖ ಕರ್ತವ್ಯವಾಗಿದೆ ಪ್ರಮುಖ ಕರ್ತವ್ಯವಾಗಿದೆ.

ಪೋಷಕರಿಗೆ ಮತ್ತು ಪಾಲಕರಿಗೆ ಶಿಕ್ಷಣದ ಮಹತ್ವದ ಬಗ್ಗೆ ತಿಳುವಳಿಕೆ ನೀಡುವುದು ನಮ್ಮೆಲ್ಲರ ಮೇಲಿರುವಂತಹ ಜವಾಬ್ದಾರಿ ಯಾಗಿದೆ ಮಕ್ಕಳ ಬೆಳವಣಿಗೆಗೆ ಬೇಕಾಗಿರುವಂತಹ ಪ್ರಮುಖವಾದ ಅಂಶ ಗಳೆಂದರೆ ಪ್ರೀತಿ ಅಕ್ಕರೆ ಬಾಲ್ಯ ರಕ್ಷಣೆ, ಪೋಷಣೆ ಮತ್ತು ಪಾಲನೆ ಹಾಗೂ ಶಿಕ್ಷಣ ಈ ಎಲ್ಲಾ ಅಂಶಗಳನ್ನು ಮಕ್ಕಳಿಗೆ ದೊರಕಿಸಿ ಕೊಟ್ಟರೆ ಗುಣಾತ್ಮಕ ಶಿಕ್ಷಣದ ಕಡೆ ದಾಪುಗಾಲು ಹಾಕುವರು ಮಕ್ಕಳು ಶಾಲೆಯ ವಾತಾವರಣದಲ್ಲಿ ತಮ್ಮ ಕಲಿಕೆ ಮತ್ತು ಭಾಗವಹಿಸುವಿಕೆಯ ಅಂಶಗಳಲ್ಲಿ ನಾವು ಕಾಣಬಹುದು ಪಾಲಕರೆ ಮಕ್ಕಳಿಗೆ ಸಂವಿಧಾನಾತ್ಮಕವಾಗಿ ಸರ್ಕಾರವು ಮಕ್ಕಳ ಕಡ್ಡಾಯ ಮತ್ತು ಉಚಿತ ಶಿಕ್ಷಣ ಜಾರಿಯಲ್ಲಿ ಇದ್ದರೂ ಸಹ ಅದರ ಬಗ್ಗೆ ಅರಿವಿಲ್ಲದೆ ಮತ್ತು ಮಕ್ಕಳ ಕಾನೂನುಗಳನ್ನ ಸಕಾಲ ದಲ್ಲಿ ಜಾರಿಗೊಳಿಸುವ ಸರ್ಕಾರಗಳು ಉತ್ತಮ ರೀತಿಯಲ್ಲಿ ಪೋಷಕರಿಗೆ ಪಾಲಕರಿಗೆ ಅರಿವು ಮೂಡಿಸದೆ ಇರುವುದರಿಂದ ಮಕ್ಕಳ ಶಿಕ್ಷಣ ಕುಂಠಿತಗೊಳ್ಳುತ್ತಾ ಬರುತ್ತಿರುವುದು ಕಂಡು ಬರುತ್ತಿದೆ.

### ಬದಲಾಗುತ್ತಿರುವ ನಮ್ಮ ವಾತಾವರಣದಲ್ಲಿ ಪಾಲಕರ ಕರ್ತವ್ಯ

*ಜಗತ್ತಿನಾದ್ಯಂತ ಸ್ಪರ್ಧಾತ್ಮಕತೆ ಬೆಳೆಯುತ್ತಿದೆ ಇಂತಹ ಸಂದರ್ಭದಲ್ಲಿ ಶಾಲೆಗೆ ಹೋಗುವ ಮಕ್ಕಳನ್ನು ಶಾಲೆ ನಡೆಯುವ ದಿನಗಳಲ್ಲಿ ಹೊಲದ ಕೆಲಸಕ್ಕೆ ಮತ್ತು ಹಿತರೆ ಕ್ಷೇತ್ರದ ಕೆಲಸಕ್ಕೆ ಮಕ್ಕಳನ್ನು ಶಾಲೆ ಬಿಡಿಸಿ ಬೇರೆ ಕೆಲಸಕ್ಕೆ ಕಳಿಸುವುದು ಎಷ್ಟು ಸರಿ.

*ಪಾಲಕರು ಮಕ್ಕಳ ಬಗ್ಗೆ ಅಪಾರವಾದ ಕಾಳಜಿ ಮತ್ತು ಜವಾಬ್ದಾರಿನ ವಹಿಸಬೇಕಾದ ಪ್ರಮುಖ ಅಂಶಗಳನ್ನು ತಮ್ಮ ಗಮನಕ್ಕೆ ತರಲು ನಾನು ಬಯಸುತ್ತೇನೆ.

*ನಿಮ್ಮ ಮಕ್ಕಳನ್ನು ಕೆಲಸಕ್ಕೆ ಕಳಿಸಿದರೆ ಕೆಲಸ ಮಾಡುವ ಮಕ್ಕಳಲ್ಲಿ ಕಲಿಕೆಯ ಆಸಕ್ತಿ ಕಡಿಮೆಯಾಗುತ್ತದೆ *ಕೆಲಸದ ವಾತಾವರಣಕ್ಕೆ ಹೊಂದಿಕೊಂಡು ಮರಳಿ ಶಾಲೆಗೆ ಬರುವುದಿಲ್ಲ ಶಾಲೆಗೆ ಹಾಜರಾಗುವುದನ್ನು ತಪ್ಪಿಸಬೇಕು ಶಾಲೆಯಲ್ಲಿ ಮತ್ತು ಮನೆಯಲ್ಲಿ ಕಲಿಕಾ ಸಾಮಗ್ರಿಗಳನ್ನು ಒದಗಿಸಬೇಕು

*ಮಕ್ಕಳ ಮೇಲೆ ನಿಗಾ ವಹಿಸಿ ಓದಲು ಮತ್ತು ಅಭ್ಯಾಸ ಮಾಡಲು ಪ್ರೋತ್ಸಾಹಿಸಬೇಕು.ಶಾಲಾ ಮೇಲ್ ಉಸ್ತುವಾರಿ ಸಮಿತಿ ಮತ್ತು ಶಿಕ್ಷಕರು ಪಾಲಕರು ಹಾಗೂ ಪೋಷಕರು ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡಬೇಕು

*ಪಾಲಕರು ಕನಿಷ್ಠ ಮೂರು ತಿಂಗಳಿಗೆ ಒಂದು ಬಾರಿ ಶಾಲೆಗೆ ಹೋಗಿ ತಮ್ಮ ಮಕ್ಕಳ ಕಲಿಕೆಯ ಕುರಿತು ತಿಳಿಯಬೇಕು

*ಮಕ್ಕಳ ಕಲಿಕೆ ಮತ್ತು ಬೆಳವಣಿಗೆ ಹಾಗೂ ಗುಣಾತ್ಮಕ ಶಿಕ್ಷಣದ ಕುರಿತು ಅನುಸರಣೆ ಮತ್ತು ಪ್ರೋತ್ಸಾಹ ನೀಡಬೇಕು



ಬರಹಗಾರರು
ಸಿದ್ದಲಿಂಗಪ್ಪ ಕಾಕರಗಲ್

ಯುವ ಮಾರ್ಗ



# ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿರುವ ಸಿದ್ದರಾಮಯ್ಯ ಸರ್ಕಾರ : ಬಿ.ವೈ.ವಿಜಯೇಂದ್ರ ಆಕ್ರೋಶ

**ಪುತ್ತೂರು(ದಕ್ಷಿಣ ಕನ್ನಡ),ನ.19–** ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಕೂಪ ತುಂಬಿ ತುಳುಕುತ್ತಿದ್ದು, ಆದಷ್ಟು ಬೇಗ ಸರ್ಕಾರ ತೊಲಗಲಿ ಎಂದು ಜನರು ಬಯಸುತ್ತಿರುವುದಾಗಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿದ್ದರಾಮಯ್ಯನವರು ಮಹಾನ್ ಸತ್ಯ ಹರಿಶ್ಚಂದ್ರರಂತೆ ಮಾತನಾಡುತ್ತಾರೆ. ಕೇಂದ್ರ ಸರ್ಕಾರದ ಬಗ್ಗೆ ಮಾತನಾಡುವ ನೈತಿಕತೆಯನ್ನು ಉಳಿಸಿಕೊಂಡಿಲ್ಲ. ಮೊದಲು ಕಾಂಗ್ರೆಸ್ ಪಕ್ಷದಲ್ಲಿ ಏನು ನಡೆಯುತ್ತದೆ ಎಂಬುದನ್ನು ನೋಡಿಕೊಂಡು ಮಾತನಾಡಿ ಎಂದು ತಿರುಗೇಟು ನೀಡಿದರು.

ಪ್ರತಿಯೊಂದು ಕ್ಷೇತ್ರದಲ್ಲೂ ಭ್ರಷ್ಟಚಾರ ಮುಗಿಲು ಮುಟ್ಟಿದೆ. ಲಂಚ ಕೊಡದೆ ಯಾವ ಕೆಲಸಗಳು ನಡೆಯುವುದಿಲ್ಲ. ಜನರು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದು ಇಡೀ ಶಾಪ ಹಾಕುತ್ತಿದ್ದಾರೆ. ಎಷ್ಟು ಬೇಗ ಈ ಕಾಂಗ್ರೆಸ್ ಅಧಿಕಾರದಿಂದ ತೊಲಗುತ್ತದೆಯೋ ಎಂದು ಎದುರು ನೋಡುತ್ತಿದ್ದಾರೆ. ಜನರ ವಿರೋಧಿ ಸರ್ಕಾರ ಇದ್ದರೂ ಒಂದೇ ಬಿಟ್ಟರೂ ಒಂದೇ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ. ಅಭಿವೃದ್ಧಿ ಕುರಿತು ಚಿಂತಿಸಬೇಕಾದ ಮುಖ್ಯಮಂತ್ರಿ,ಉಪ ಮುಖ್ಯಮಂತ್ರಿ, ಸಚಿವ



ಸಂಪುಟದವರು ದೆಹಲಿಯಲ್ಲೆ ಬೀಡುಬಿಟ್ಟಿದ್ದಾರೆ. ಕಾಂಗ್ರೆಸ್ ಪಕ್ಷವು ತಾನು ನೀಡಿದ ಭರವಸೆಗಳನ್ನು ಈಡೇರಿಸಿಲ್ಲ; ಕಾಂಗ್ರೆಸ್ಸಿನ ಭರವಸೆ ನಂಬಿ ಮೋಸಹೋದ ಭಾವನೆ ಮತದಾರರಲ್ಲಿದೆ ಎಂದರು.

ರಾಜ್ಯದ ರೈತರು, ಕಬ್ಬು ಬೆಳೆಗಾರರು ತೀವ್ರ ಸಂಕಷ್ಟದಲ್ಲಿದ್ದಾರೆ. ರಾಜ್ಯ ಸರಕಾರವು ಖರೀದಿ ಕೇಂದ್ರ ತೆರೆದಿಲ್ಲವೆಂದು ಆಕ್ಷೇಪಿಸಿ ಮೆಕ್ಕೆ ಜೋಳ ಬೆಳೆಗಾರರೂ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ . ಇದರ ನಡುವೆ ಮುಖ್ಯಮಂತ್ರಿ ಕುರ್ಚಿಗೆ ಪೈಪೋಟಿ ದಿನೇದಿನೇ ಹೆಚ್ಚಾಗುತ್ತಿದೆ ಎಂದ ಅವರು, ಭ್ರಷ್ಟ–ಜನವಿರೋಧಿ ಕಾಂಗ್ರೆಸ್ ಸರಕಾರದ ವಿರುದ್ಧ ಅಧಿವೇಶನದಲ್ಲಿ ಮತ್ತು ಹೊರಗಡೆ ಹೋರಾಟ ಮಾಡಲು ಬಿಜೆಪಿ ನಿರ್ಧರಿಸಿದೆ ಎಂದು ತಿಳಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪುರುಷೋತ್ತಮ ಬಿಳಿಮಲೆ ಅವರು, ಕರಾವಳಿ ಭಾಗದ ಯಕ್ಷಗಾನ ಕಲಾವಿದರು ಸಲಿಂಗಕಾಮಿಗಳು ಎಂಬ ಉದ್ಧಟತನದ ಹೇಳಿಕೆ ನೀಡಿದ್ದಾರೆ ಎಂದು ಖಂಡಿಸಿದರು.

ಅವರ ಹೇಳಿಕೆ ಯಕ್ಷಗಾನ ಕಲಾವಿದರು, ಕರಾವಳಿ ಭಾಗಕ್ಕೆ ಮಾತ್ರವಲ್ಲದೇ ಇಡೀ ಹಿಂದೂ ಸಮಾಜಕ್ಕೆ ಮಾಡಿದ ಅವಮಾನ ಎಂದು ಆಕ್ಷೇಪಿಸಿದರು. ಅವರ ಹೇಳಿಕೆಯು ಕಾಂಗ್ರೆಸ್ ಪಕ್ಷದ ಮನಸ್ಥಿತಿಯನ್ನು ಬಿಂಬಿಸುತ್ತದೆ ಎಂದು ಹೇಳಿದರು.

ಮುಖ್ಯಮಂತ್ರಿ, ಸರಕಾರಕ್ಕೆ ಇಲ್ಲಿನ ಕಲೆ, ಪರಂಪರೆ, ಸಂಸ್ಕೃತಿ ಬಗ್ಗೆ ಕಿಂಚಿತ್ತಾದರೂ ತಕ್ಷಣ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ಕಿತ್ತು ಬಿಸಾಕಬೇಕು. ಬಿಜೆಪಿ ಮಾತ್ರವಲ್ಲ ಇಡೀ ಹಿಂದೂ ಸಮಾಜ ಇದನ್ನು ಖಂಡಿಸಬೇಕಿದೆ. ಪಕ್ಷಾತೀತವಾಗಿ ಇದರ ವಿರುದ್ಧ ಹೋರಾಟ ಮಾಡಬೇಕಿದೆ ಎಂದು ಪ್ರಶ್ನೆಗೆ ಉತ್ತರಿಸಿದರು.ಸ್ಪೀಕರ್ ಯು.ಟಿ.ಖಾದರ್ ಅವರ ವಿರುದ್ಧ ಹಿಂದಿನ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಭ್ರಷ್ಟಾಚಾರದ ಕುರಿತು ಆಧಾರಸಹಿತ ಆರೋಪ ಮಾಡಿದ್ದಾರೆ. ಆ ಸ್ಥಾನದ ಗೌರವ ಉಳಿಸಲು ಅವರೇ ರಾಜೀನಾಮೆ ಕೊಟ್ಟರೆ ಒಳ್ಳೆಯದು ಎಂದು ಇನ್ನೊಂದು ಪ್ರಶ್ನೆಗೆ ಉತ್ತರ ಕೊಟ್ಟರು.

# ನಟ ದರ್ಶನ್ ಗೆ ಕಂಬಳಿ ಕೊಡಲು ಜಡ್ಜ್ ಸೂಚನೆ



**ಬೆಂಗಳೂರು,ನ.19–**ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ನಗರದ 57ನೇ ಸಿಸಿಹೆಚ್ ನ್ಯಾಯಾಲಯಕ್ಕೆ ವಿಡಿಯೋ ಕಾನ್ಫರೆನ್ಸ್ ಮೂಲಕ ದರ್ಶನ್ ವಿಚಾರಣೆಗೆ ಹಾಜರಿ ಹಾಕಿದ್ದಾರೆ.

ಈ ವೇಳೆ ನೀಲಿ ಬಣ್ಣದ ಟಿ ಶರ್ಟ್, ಕಪ್ಪು ಟ್ರ್ಯಾಕ್ ಪ್ಯಾಂಟ್ ಧರಿಸಿದ್ದರು. ಮೊದಲು ಆರೋಪಿಗಳ ಹಾಜರಾತಿ ಪಡೆಯಲಾಯಿತು. ಸಿಆರ್‌ಪಿಸಿ 294 ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಆರೋಪಿಗಳ ಪರ ವಕೀಲರಿಂದ ಕಾಲಾವಕಾಶ ಕೋರಿಕೆ ಸಲ್ಲಿಕೆ ಆಗಿದೆ.

ಆರೋಪಿ ನಾಗರಾಜ್ ಕೋರ್ಟ್ ಗೆ ಮನವಿ ಮಾಡ 'ಮನೆಯಿಂದ ತಂದುಕೊಟ್ಟ ಕಂಬಳಿ ನೀಡುತ್ತಿಲ್ಲ. ಜಾಸ್ತಿ ಚಳಿ ಇದ್ದರೂ ಹೆಚ್ಚುವರಿ ಕಂಬಳಿ ನೀಡುತ್ತಿಲ್ಲ' ಎಂದು ಹೇಳಿದ್ದಾರೆ.

ಅತ್ತ 'ಐ ಕಾಂಟ್ ಈವನ್ ಸ್ಲೀಪ್' ಎಂದು ದರ್ಶನ್ ಇಂಗ್ಲಿಷ್‌ನಲ್ಲಿ ಮಾತು ಆರಂಭಿಸಿದರು.ತುಂಬಾನೇ ಚಳಿ ಇದೆ. ನಾವ್ಯಾರೂ ರಾತ್ರಿ ಮಲಗುತ್ತಿಲ್ಲ. ಹೆಚ್ಚುವರಿ ಕಂಬಳಿ ಕೊಡಿಸಿ' ಎಂದು ಕೋರ್ಟ್‌ಗೆ ದರ್ಶನ್ ಮನವಿ ಮಾಡಿದರು. ಈ ಮನವಿ ಬಳಿಕ ಜಡ್ಜ್, 'ಪದೇ ಪದೇ ಆದೇಶ ಮಾಡಿದರೂ ಹೀಗ್ಯಾಕೆ ಮಾಡುತ್ತಾರೆ ಚಳಿ ಇದ್ದಾಗ ಕಂಬಳಿ ಕೊಡಬೇಕಲ್ಲವೇ' ಎಂದು ಪ್ರಶ್ನೆ ಮಾಡಿದರು. ದರ್ಶನ್‌ಗೆ ಕಂಬಳಿಕೊಡಲು ಜೈಲು ಅಧಿಕಾರಿಗಳಿಗೆ ಜಡ್ಜ್ ಸೂಚನೆ ನೀಡಿದರು


ವಿಚಾರಣೆ ಮುಂದಕ್ಕೆ:ಪ್ರಕರಣದ ವಿಚಾರಣೆಯನ್ನು ಕೋರ್ಟ್ ವಿಚಾರಣೆ ಡಿ.3ಕ್ಕೆ ಮುಂದೂಡಿದೆ. ಅಲ್ಲದೆ, ಆರೋಪಿ 14 ಪ್ರದೋಷ್ ಮಧ್ಯಂತರ ಜಾಮೀನನ್ನು ನ.22ರವರೆಗೆ ವಿಸ್ತರಣೆ ಮಾಡಲಾಗಿದೆ. ದರ್ಶನ್ ತಮ್ಮ ಮೇಲೆ ಬಂದ ಆರೋಪ ಎಲ್ಲವನ್ನೂ ತಿರಸ್ಕರಿಸಿದ್ದಾರೆ. ಇದರಿಂದ ಅವರು ವಿಚಾರಣೆ ಎದುರಿಸಬೇಕಿದೆ.

# ಚಳಿಗಾಲದ ಅಧಿವೇಶನಕ್ಕೆ ಸಕಲ ಸಿದ್ಧತೆ: ಹೊರಟ್ಟಿ

**ಹಾವೇರಿ,ನ19–**ದಕ್ಷಿಣ ಕರ್ನಾಟಕದ ಶಾಸಕರು ಉತ್ತರ ಕರ್ನಾಟಕದ ಜನರ ಸಮಸ್ಯೆ ಚರ್ಚಿಸುತ್ತಾರೆ. ಆದರೆ ಉತ್ತರ ಕರ್ನಾಟಕದ ಶಾಸಕರು ಇಲ್ಲಿಯ ಸಮಸ್ಯೆ ಬಗ್ಗೆ ಚರ್ಚಿಸುವುದಿಲ್ಲ ಎಂದು ಬಸವರಾಜ್ ಹೊರಟ್ಟಿ ಹೇಳಿದರು.

ಹಾವೇರಿ: ಬೆಳಗಾವಿ ಸುವರ್ಣ ಸೌಧದಲ್ಲಿ ಚಳಿಗಾಲ ಅಧಿವೇಶನಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ತಿಳಿಸಿದ್ದಾರೆ.ಹಾವೇರಿಯಲ್ಲಿ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಬೆಳಗಾವಿ ಚಳಿಗಾಲದ ಅಧಿವೇಶನ ಎಂದರೆ ಪ್ರತಿಭಟನೆಗೆ ಸೀಮಿತ ಎನ್ನುವ ಮಾತು ಇದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಈ ಆರೋಪದಿಂದ ಅದನ್ನು ದೂರ ಮಾಡಬೇಕು. ಶಿಕ್ಷಣ, ಉದ್ಯೋಗ ಸೇರಿದಂತೆ ಅಭಿವೃದ್ಧಿ ವಿಷಯ ಚರ್ಚೆಯಾಗಬೇಕು ಎಂದು ತಿಳಿಸಿದರು.

ಕಬ್ಬು ಬೆಳೆಗಾರರ ಅನೇಕ ಸಮಸ್ಯೆಗಳು ಇವೆ. ಸದನದಲ್ಲಿ ಗದ್ದಲ ಗಲಾಟೆ ಆಗದಂತೆ ನೋಡಿಕೊಳ್ಳವುದು. ಸದನವನ್ನು ಮುಂದೂಡದೆ ಚರ್ಚೆ ಮಾಡಬೇಕು. ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತೇವೆ. ದಕ್ಷಿಣ ಕರ್ನಾಟಕದ ಶಾಸಕರು ಉತ್ತರ ಕರ್ನಾಟಕದ ಜನರ ಸಮಸ್ಯೆ ಚರ್ಚಿಸುತ್ತಾರೆ. ಆದರೆ, ಉತ್ತರ ಕರ್ನಾಟಕದ ಶಾಸಕರು ಇಲ್ಲಿಯ ಸಮಸ್ಯೆ ಬಗ್ಗೆ ಚರ್ಚಿಸುವುದಿಲ್ಲ ಎಂದು ತಿಳಿಸಿದರು.ಪ್ರಶ್ನೋತ್ತರ ಮುಗಿದ ಬಳಿಕ ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಚರ್ಚೆ ಮಾಡುತ್ತೇವೆ. ಕಳೆದ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಉತ್ತರ ಕರ್ನಾಟಕದ ಶಾಸಕರು ಮಾತನಾಡಲಿಲ್ಲ. ದಕ್ಷಿಣ ಕರ್ನಾಟಕದ ಶಾಸಕರು ಮಾತನಾಡಿದ್ದಾರೆ. ಅದನ್ನು ಬರೆದು ಇಟ್ಟಿದ್ದೇನೆ. ಫೋನ್ ಮಾಡಿ ಎಲ್ಲಾ ಶಾಸಕರಿಗೂ ಹೇಳುತ್ತಿದ್ದೇನೆ ಎಂದು ಹೇಳಿದರು. ಶಾಸಕ ರಾಜು ಕಾಗೆ ಪ್ರತ್ಯೇಕ ರಾಜ್ಯದ ಕೂಗಿನ ಬಗ್ಗೆ ಮಾತನಾಡಿದ ಬಸವರಾಜ ಹೊರಟ್ಟಿ ಅವರು, ಪ್ರತ್ಯೇಕ ರಾಜ್ಯ ಮಾಡುವು ದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಕರ್ನಾಟಕದ ಏಕೀಕರಣಕ್ಕಾಗಿ ಬಹಳಷ್ಟು ಜನರು ಹೋರಾಟ ಮಾಡಿದ್ದಾರೆ. ಅಖಂಡ ಕರ್ನಾಟಕ ಇರಬೇಕು. ಪ್ರತ್ಯೇಕತೆಗೆ ನನ್ನ ಸಹಮತ ಇಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿ ದರು.ಸದನದಲ್ಲಿ ಭಾಗವಹಿಸುವಂತೆ ಈಗಾಗ'ಲೇ 38 ಜನರಿಗೆ ಮಾತನಾಡಿದ್ದೇನೆ. ಉಳಿ ದವರ ಜೊತೆಯೂ ಮಾತನಾಡುತ್ತೇನೆ.



ಎಲ್ಲರೂ ಅಧಿವೇಶನದಲ್ಲಿ ಭಾಗವಹಿಸಿ ಸದನದ ಗೌರವ ಹೆಚ್ಚಿಸಬೇಕು ಎಂದು ಹೊರಟ್ಟಿ ಮನವಿ ಮಾಡಿದರು. ಸಭಾಪತಿ ಹುದ್ದೆಯಿಂದ ಕೆಳಗಡೆ ಇಳಿಸುವ ವಿಚಾರದ ಕುರಿತು ಮಾತನಾಡಿದ ಅವರು, ನಾನು ಒಂದು ಸಲ ಪರಿಷತ್ ಸಭಾಪತಿ ಆಗಿದ್ದೇನೆ. ಎಷ್ಟು ವರ್ಷ ಆಗಿದ್ದರೂ ಮಾಜಿ ಆಗಲೇಬೇಕು. ವಿಧಾನ ಪರಿಷತ್ ಸಭಾಪತಿ ಹುದ್ದೆ ಬಗ್ಗೆ ನಾನು ತಲೆ ಕೆಡೆಸಿಕೊಳ್ಳುವುದಿಲ್ಲ. ಸರ್ಕಾರ ಮತ್ತು ಶಾಸಕರು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನು ಬದ್ಧ ಎಂದು ತಿಳಿಸಿದರು.

# ಸಂಗಮೇಶ್ವರ ಆಸ್ಪತ್ರೆಯಲ್ಲಿ ವಿಶ್ವ ಪ್ರೀ–ಮೆಚ್ಯುರಿಟಿ ದಿನಾಚರಣೆ



**ಕಲಬುರಗಿ,ನ.19–**ಅವಧಿಪೂರ್ವ ಜನನ ಸಂಬಂಧಿತ ಸಾವುಗಳು, ಸವಾಲುಗಳು ಮತ್ತು ಅವುಗಳನ್ನು ತಡೆಗಟ್ಟಲು ಕೈಗೆಟುಕುವ ಮಾರ್ಗಗಳು ಸೇರಿದಂತೆ ಅವಧಿಪೂರ್ವ ಜನನಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ನವೆಂಬರ್ 17 ರಂದು ವಿಶ್ವ ಅವದಿ ಪೂರ್ವ ದಿನವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ ಎಂದು ಖ್ಯಾತ ಮಕ್ಕಳ ತಜ್ಞ ಡಾ ಕಿರಣ್ ಹೊಸ ಗೌಡ ಹೇಳಿದರು.

ಅವರು ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಂಗಮೇಶ್ವರ ಬೋಧನಾ ಹಾಗೂ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದ 2025 ನೇ ಸಾಲಿನ ಪ್ರೀ–ಮೆಚ್ಯುರಿಟಿ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಈ ದಿನದಂದು, ವಿಶ್ವ ಆರೋಗ್ಯ ಸಂಸ್ಥೆ ,ಪ್ಯಾನ್ ಅಮೇರಿಕನ್ ಆರೋಗ್ಯ ಸಂಸ್ಥೆ , ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ತುರ್ತು ನಿಧಿ ಮತ್ತು ಮಾರ್ಚ್ ಆಫ್ ಡೈಮ್ಸ್ ಸೇರಿದಂತೆ ವಿವಿಧ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು, ಆಸ್ಪತ್ರೆಗಳು, ಲಾಭರಹಿತ ಸಂಸ್ಥೆಗಳು ಮತ್ತು ಆರೋಗ್ಯ ವೃತ್ತಿಪರರು ಒಟ್ಟಾಗಿ ಚಟುವಟಿಕೆಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ನಡೆಸಿ ವಿಶ್ವಾದ್ಯಂತ ಅಕಾಲಿಕ ಜನನದ ತೊಂದರೆಗಳು ಮತ್ತು ಹೊರೆಗಳ ಬಗ್ಗೆ ಜಾಗೃತಿ ಮೂಡಿಸುತ್ತಾರೆ ಎಂದು ಹೇಳಿದರು.

ನಂತರ ಆಸ್ಪತ್ರೆಯ ವೈದ್ಯಕೀಯ ಅಧಿಕ್ಷಕರಾದ ಡಾ.ಮಹಾನಂದಾ ಮೇಳಕುಂದಿ ಮಾತನಾಡಿ ಅವಧಿಪೂರ್ವ ಜನನವು ಹಲವಾರು ಕಾರಣಗಳಿಂದ ಸಂಭವಿಸಬಹುದು. ಹೆಚ್ಚಿನ ಅವಧಿಪೂರ್ವ ಜನನಗಳು ಸ್ವಾಭಾವಿಕವಾಗಿ ಸಂಭವಿಸುತ್ತವೆ. ಆದಾಗ್ಯೂ, ಕೆಲವು ಸೋಂಕುಗಳು ಅಥವಾ ಗರ್ಭಧಾರಣೆಯ ಇತರ ಸಮಸ್ಯೆಗಳಂತಹ ವೈದ್ಯಕೀಯ ಕಾರಣಗಳಿಂದ ಉಂಟಾಗುತ್ತವೆ, ಅದು ಹೆರಿಗೆಗೆ ಆರಂಭಿಕ ಪ್ರಚೋದನೆ ಅಥವಾ ಸಿಸೇರಿಯನ್ ಹೆರಿಗೆಗೆ ಕಾರಣವಾಗುತ್ತದೆ ಎಂದು ಹೇಳಿದರು.

ಇದೆ ಸಂದರ್ಭದಲ್ಲಿ ಮಕ್ಕಳ ವೈದ್ಯರಾದ ಡಾ.ಬಸವರಾಜ ಪಾಟೀಲ್, ಡಾ.ಐಶ್ವರ್ಯ ಮತ್ತು ಡಾ.ಶಿವಕುಮಾರ್ ಸಂಗೋಳಗಿ ಅವರು ಆಸ್ಪತ್ರೆಯ ಎನ್‌ಐಸಿಯುನಲ್ಲಿ ದಾಖಲಾಗಿರುವ 2 ಅಕಾಲಿಕ ಶಿಶುಗಳ ಪ್ರಕರಣಗಳನ್ನು ಪ್ರಸ್ತುತಪಡಿಸಿ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ವಿವಿಧ ತೊಡಕುಗಳು ಮತ್ತು ಅಕಾಲಿಕ ಶಿಶುಗಳನ್ನು ಹೇಗೆ ನಿರ್ವಹಿಸಬೇಕು ಎಂಬುದರ ಕುರಿತು ವಿವರಿಸಿದರು ಈ ಸಂದರ್ಭದಲ್ಲಿ ಆಸ್ಪತ್ರೆಯ ಆಹಾರ ತಜ್ಞೆ ಡಾ. ಪಾರ್ವತಿ ಭೀಮಳ್ಳಿ ಉಪಸ್ಥಿತರಿದ್ದರು.

# ಯುವನಿಧಿ ಯೋಜನೆ ಅರಿವು ಕಾರ್ಯಕ್ರಮ



**ನವಲಗುಂದ,ನ.19–** ರಾಜ್ಯ ಸರ್ಕಾರ ಜಾರಿಗೊಳಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಯುವನಿಧಿ ಕೂಡ ಒಂದು. ಯುವ ಜನತೆಯ ಉಜ್ವಲ ಭವಿಷ್ಯಕ್ಕಾಗಿ ಈ ಯೋಜನೆ ತರಲಾಗಿದ್ದು ತಾಲ್ಲೂಕಿನಲ್ಲಿನರುವ ನಿರುದ್ಯೋಗಿ ಯುವಜನರು ಇದರ ಸದುಪಯೋಗಪಡಿಸಿಕೊಳ್ಳಿ ಎಂದು ಜಿಲ್ಲಾ ಉದ್ಯೋಗ ಮಾಹಿತಿ ಕೇಂದ್ರದ ಸಹಾಯಕ ನೇಮಕಾತಿ ಅಧಿಕಾರಿ ಎಂ.ಎಂ. ಕುದುರೆಗೊಂಡ ತಿಳಿಸಿದರು.

ಅವರು ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ, ಜಿಲ್ಲಾ ಉದ್ಯೋಗ ಮಾಹಿತಿ ಕೇಂದ್ರ ಹುಬ್ಬಳ್ಳಿ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇವರಗಳ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದ್ದ ಯುವನಿಧಿ ಯೋಜನೆಯ ಅರಿವು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಎಂ.ಬಿ. ಬಾಗಡಿ ಮಾತನಾಡಿಯುವನಿಧಿ ಯೋಜನೆಯು ಯುವ ಸಮೂಹಕ್ಕೆ ದಾರಿದೀಪವಾಗಿದ್ದು, ಭವಿಷ್ಯ ರೂಪಿಸಲು ಸಹಕಾರಿಯಾಗಿದೆ ಎಂದರು.ಮುಖ್ಯಅತಿಥಿಗಳಾದ ಚಿಲಕವಾಡ ಪಿಯು ಕಾಲೇಜ ಪ್ರಾಂಶುಪಾಲರಾದ ಮಂಜುಳಾ ಕಲ್ಯಾಣಿ ಜಿಲ್ಲಾ ಉದ್ಯೋಗ ಮಾಹಿತಿ ಕೇಂದ್ರದ ತರಬೇತಿದಾರ ನಾಗರಾಜ್ ಬಡಿಗೇರ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಐ.ಕ್ಯೂ.ಎ.ಸಿ ಸಂಚಾಲಕರಾದ ಸಂತೋಷ ಹುಬ್ಬಳ್ಳಿ, ಸಹ ಸಂಚಾಲಕರಾದ ಪ್ರಸನ್ನ ಪಂಡರಿ ಉಪಸ್ಥಿತರಿದ್ದರು. ಪ್ಲೇಸ್ಮೆಂಟ್ ಅಧಿಕಾರಿ ಗಂಗಾಧರ ಗೌಡರ ಪ್ರಸ್ತಾವಿಕ, ರವಿ ಬ್ಯಾಹಟ್ಟಿ ನಿರೂಪಣೆ ಗ್ರಂಥಪಾಲಕರಾದ ಶ್ರೀಧರ ಲೋಣಕರ ವಂದಿಸಿದರು.

ನಂತರ ಸ್ಥಳದಲ್ಲಿಯೇ ಇದ್ದ ಅಭ್ಯರ್ಥಿಗಳ ಯುವನಿಧಿ ಯೋಜನೆಗೆ ನೋಂದಣಿ ಕಾರ್ಯ ನಡೆಯಿತು.

# ಬೆಂಗಳೂರಲ್ಲಿ ಬಿಗ್ ರಾಬರಿ, ಹಾಡುಹಗಲೇ 7 ಕೋಟಿ ರೂ ದರೋಡೆ..!

**ಬೆಂಗಳೂರು,ನ.19–** ನಗರದಲ್ಲಿ ಹಾಡಹಗಲೇ 7.11 ಕೋಟಿ ಹಣ ದರೋಡೆ ಮಾಡಿಕೊಂಡು ಗ್ಯಾಂಗ್ ಪರಾರಿಯಾಗಿರುವ ಘಟನೆ ನಡೆದಿದೆ. ಇಂದು ಮಧ್ಯಾಹ್ನ 2.30ರ ಸುಮಾರಿನಲ್ಲಿ ಜಯದೇವ ಆಸ್ಪತ್ರೆ ಮತ್ತು ಡೇರಿ ಸರ್ಕಲ್ ನಡುವೆ ಈ ದರೋಡೆ ನಡೆದಿದೆ ಎಂದು ಪ್ರಾಥಮಿಕ ಮಾಹಿತಿಗಳಿಂದ ತಿಳಿದುಬಂದಿದೆ.

ಎಟಿಎಂಗೆ ಹಣ ತುಂಬುವ ಸಂಸ್ಥೆಯ ನೌಕರರು ಒಂದು ವ್ಯಾನ್‌ನಿಂದ ಮತ್ತೊಂದು ವಾಹನಕ್ಕೆ ಹಣವನ್ನು ವರ್ಗಾಯಿಸುತ್ತಿದ್ದರು. ಈ ಮಾಹಿತಿ ಮೊದಲೇ ತಿಳಿದಿದ್ದ ದರೋ ಡೆ ಗ್ಯಾಂಗ್‌ವೊಂದು ಸಿನಿಮೀಯ ರೀತಿ ಕಾರಿನಲ್ಲಿ ಸ್ಥಳಕ್ಕೆ ಬಂದು ತಾವು ಕೇಂದ್ರ ಸರ್ಕಾರದ ಟ್ಯಾಕ್ಸ್ ಆಫೀಸರ್ ಎಂದು ಹೇಳಿ 7.11 ಕೋಟಿ ಹಣವನ್ನು ದರೋಡೆ ಮಾಡಿಕೊಂಡು ಕ್ಷಣಾರ್ಧದಲ್ಲಿ ಪರಾರಿಯಾಗಿದೆ. ಸುದ್ದಿ ತಿಳಿಯುತ್ತಿದ್ದಂತೆ ನಗರ ಪೊಲೀಸರು ನಗರಾದ್ಯಂತ ನಾಕಾಬಂಧಿ ಮಾಡಿ ದರೋಡೆಕೋರರು ಹಾಗೂ 7.11 ಕೋಟಿ ಹಣಕ್ಕಾಗಿ ಶೋಧ ನಡೆಸುತ್ತಿದ್ದಾರೆ. ದರೋಡೆಕೋರರ ತಂಡದಲ್ಲಿ 7ರಿಂದ 8 ಮಂದಿ ಇದ್ದರೆಂದು ತಿಳಿದು ಬಂದಿದೆ.

# ಸಿಯುಕೆಯಿಂದ ಸಾಗರ ಗಜ್ರೆಗೆ ಪಿಎಚ್‌ಡಿ



**ಆಳಂದ:ನ.19–** ಹಾಪ್ಕಾಮ್ಸ್ ಅನ್ನು ಕೆಎಂಎಫ್ ಮಾದರಿಯಲ್ಲಿ ಸಹಕಾರಿ ತೋಟಗಾರಿಕೆ ಸಂಸ್ಥೆಯಾಗಿ ನಿರ್ಮಿಸುವುದು ಇಂದಿನ ಅಗತ್ಯತೆ ಎಂಬ ಸಂಶೋಧನ ಪ್ರಬಂಧ ಮಂಡಿಸಿದ ಸಾಗರ ಗಜ್ರೆ ಅವರಿಗೆ ತಾಲೂಕಿನ ಕಡಗಂಚಿ ಬಳಿಯಿರುವ ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಪಿಎಚ್‌ಡಿ ನೀಡಿದೆ.

ವ್ಯವಹಾರ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕ ಡಾ. ಗಣಪತಿ ಬಿ. ಸಿನ್ನೂರ ಅವರ ಮಾರ್ಗದರ್ಶನದಲ್ಲಿ ಈ ಸಂಶೋಧನೆಗಾಗಿ ಸಿಯುಕೆ ಸಾಗರ ಗಜ್ರೆ ಅವರಿಗೆ ನಿರ್ವಹಣಾ ಅಧ್ಯಯನದಲ್ಲಿ ಪಿಎಚ್‌ಡಿ ಪದವಿ ಘಟಿಕೋತ್ಸವದಲ್ಲಿ ಗೌರವಿಸಿದೆ.

ಯುವ ಮಾರ್ಗ



## ನಾಗರಡ್ಡಿಕ್ಯಾಂಪ್ ಸರಕಾರಿ ಕಿರಿಯ ಪ್ರಾಥಮಿಕ ಶಾಲಾಕಟ್ಟಡ ಉದ್ಘಾಟನೆ



ಯುವಮಾರ್ಗ ಸುದ್ದಿ

**ಬಳಗಾನೂರು,ನ.19–** ಪಟ್ಟಣದ ಸಮೀಪದ ಗೌಢನಭಾವಿವಲಯದ ನಾಗರೆಡ್ಡಿಕ್ಯಾಂಪ್‌ನಲ್ಲಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ 2021–22 ನೇಸಾಲಿನ ಕಲಬುರ್ಗಿ ಕಲ್ಯಾಣಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮೈಕ್ರೋ ಯೋಜನೆಯಡಿಯಲ್ಲಿ ಸುಮಾರು 40.04 ಲಕ್ಷ ರೂಪಾಯಿಗಳ ನಿರ್ಮಿಸಲಾದ 3 ಕೊಠಡಿಗಳನ್ನು ಈ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಹನುಮಂತಪ್ಪ, ಹಾಗೂ ಯುವಮುಖಂಡ ಸತೀಶಗೌಡ ಉದ್ಘಾಟಿಸಿದರು. ಶಾಲೆಯ ಮುಖ್ಯ ಗುರು ನಜೀರ್, ಸಿಆರ್‌ಸಿ ನಾಗರಾಜ, ಪಿಡಿಓ ವಸಂತಗೀತಾ, ಸೇರಿ ಎಸ್‌ಡಿಎಂಸಿ ಪದಾಧಿಕಾರಿಗಳು,ಮುಖಂಡರು ಗ್ರಾಪಂಸದಸ್ಯರು ಮತ್ತಿತರರು ಇದ್ದರು

## ನವೆಂಬರ್ 22 ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 17ನೇ ಸಂಸ್ಥಾಪನಾ ದಿನಾಚರಣೆ

**ರಾಯಚೂರು,ನ.19–**ಇಲ್ಲಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ 17ನೇ ಸಂಸ್ಥಾಪನಾ ದಿನಾಚರಣೆಯ ಕಾರ್ಯಕ್ರಮವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶ್ರೀ ಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ನವೆಂಬರ್ 22 ರಂದು ಶನಿವಾರ ಬೆಳಿಗ್ಗೆ 10.30 ಕ್ಕೆ ಹಮ್ಮಿಕೊಳ್ಳಲಾಗಿದೆ.

ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀನಿವಾಸುಲು ಐ.ಎಫ್.ಎಸ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಂ. ಹನುಮಂತಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಗೌರವಾನ್ವಿತ ಸದಸ್ಯರು ಆಗಿರುವ ವಿಧಾನ ಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ್ ಬಯ್ಯಾಪೂರ, ಕರ್ನಾಟಕ ಸರ್ಕಾರದ ಅರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ರಿತೀಶ್ ಕುಮಾರ್ ಸಿಂಗ್, ಸರ್ಕಾರದ ಅರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಎಸ್ ಸೆಲ್ವಕುಮಾರ, ಕರ್ನಾಟಕ ಸರ್ಕಾರದ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಕಾರ್ಯದರ್ಶಿಗಳಾದ ಡಾ.ಶಮ್ಲಾ ಇಕ್ಬಾಲ್, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಗೌರವಾನ್ವಿತ ಸದಸ್ಯರು ಆಗಿರುವ ಮಾಜಿ ವಿಧಾನಸಭೆ ಸದಸ್ಯರಾದ ಬಸನಗೌಡ ಬ್ಯಾಗವಾಟ್, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಗೌರವಾನ್ವಿತ ಸದಸ್ಯರಾದ ಮಲ್ಲಿಕಾರ್ಜುನ ಡಿ., ಮಲ್ಲೇಶ್ ಕೊಲಿಮಿ, ಮಧುಸೂಧನ್ ರೆಡ್ಡಿ, ತಿಮ್ಮಣ್ಣ ಸೋಮಪ್ಪ ಚಾವಡಿ, ಭಾರತದ ಕೃಷಿ ಸಂಘ ಸಂಸ್ಥೆ ನವದೆಹಲಿಯ ನಿರ್ದೇಶಕರಾದ ಡಾ.ಶ್ರೀನಿವಾಸ ರಾವ್ ಚರುಕಮಲ್ಲಿ, ಕೃಷಿ ಮಂಡಳಿಯ ವಿಭಾಗದ ಡೀನ್ ಡಾ.ಕೆ.ನಾರಾಯಣ ರಾವ್, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಗೌರವಾನ್ವಿತ ಸದಸ್ಯ ಕಾರ್ಯದರ್ಶಿಗಳು ಹಾಗೂ ಕುಲಸಚಿವರಾದ ಶರಣಬಸಪ್ಪ ಕೋಟೆಪ್ಪಗೋಳ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರಾದ ಡಾ. ಎಂ. ಹನುಮಂತಪ್ಪ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕರಾದ ಡಾ. ಎ. ಅಮರೇಗೌಡ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ಡೀನ್‌ರಾದ ಡಾ. ಗುರುರಾಜ ಸುಂಕದ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಾಭಿವೃದ್ಧಿಯ ಡೀನ್‌ರಾದ ಡಾ. ಯು. ಸತೀಶಕುಮಾರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಕೃಷಿ ಮಂಡಳಿಯ ವಿಭಾಗದ ಡೀನ್‌ರಾದ ಡಾ.ಕೆ.ನಾರಾಯಣ ರಾವ್, ಕೃಷಿ ತಾಂತ್ರಿಕ ಮಂಡಳಿಯ ಡೀನ್‌ರಾದ ಡಾ. ಮಲ್ಲಿಕಾರ್ಜುನ್ ಅಯ್ಯನ್‌ಗೌಡರ್, ಕಲಬುರಗಿ ಡೀನ್‌ರಾದ ಡಾ. ಎಸ್.ಬಿ. ಗೌಡಪ್ಪ, ಡೀನ್‌ರಾದ ಡಾ. ಪಿ. ಹೆಚ್. ಕುಚನೂರು, ಗಂಗಾವತಿಯ ಕೃಷಿ ಮಂಡಳಿಯ ವಿಭಾಗದ ವಿಶೇಷ ಅಧಿಕಾರಿಗಳಾದ ಡಾ. ಎಸ್. ಟಿ. ಯಂಜೀರಪ್ಪ, ಹಗರಿಯ ಪ್ರಭಾರ ಅಧಿಕಾರಿಗಳಾದ ಡಾ. ಜಿ. ರವಿಶಂಕರ, ಅಡಕತಾಧಿಕಾರಿಗಳಾದ ಡಾ. ಜಾಗೃತಿ ಬಿ. ದೇಶಮಾನ್ಯ, ಆಸ್ತಿ ಅಧಿಕಾರಿಗಳಾದ ರವಿ ಮೆಸ್ತಾ, ಹಣಕಾಸು ನಿಯಂತ್ರಣಾಧಿಕಾರಿಗಳಾದ ಹನುಮೇಶ್ ನಾಯಕ್, ಗ್ರಂಥಪಾಲಕರಾದ ಡಾ. ಮಚೇಂದ್ರನಾಥ ಎಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿರುವರು.

## ಲೈನ್ ಮ್ಯಾನ್ ಆತ್ಮಹತ್ಯೆ

**ಕಲಬುರಗಿ,ನ.19–**ಲೈನ್ ಮ್ಯಾನ್‌ವೊಬ್ಬರು ವಿದ್ಯುತ್ ಕಂಬಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕಲಬುರಗಿ ತಾಲೂಕಿನ ಬಸವಪಟ್ಟಣ ಗ್ರಾಮದಲ್ಲಿ ನಡೆದಿದೆ.

ಪರಮೇಶ್ವರ್ ಆತ್ಮಹತ್ಯೆಗೆ ಶರಣಾದವರು.

ಆತ್ಮಹತ್ಯೆಗೆ ಅಧಿಕಾರಿಗಳ ಕಿರುಕುಳ ಕಾರಣ ಎಂದು ಪರಮೇಶ್ವರ್ ಅವರ ಕುಟುಂಬಸ್ಥರು ಆರೋಪಿಸಿದ್ದಾರೆ. ಈ ಸಂಬಂಧ ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಮೊಬೈಲ್' ಬಿಡಿ, ಪುಸ್ತಕ ಹಿಡಿ : ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು

ಯುವಮಾರ್ಗ ಸುದ್ದಿ



**ದೇವದುರ್ಗ,ನ.19–**ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಇಂದಿನ ಮಕ್ಕಳ ಪಾತ್ರವು ಬಹಳ ಮಹತ್ತರವಾದದ್ದು, ಆದ್ದರಿಂದ ಮಕ್ಕಳ ಉಜ್ವಲ ಭವಿಷ್ಯದ ದೃಷ್ಟಿಯಿಂದ ಮಕ್ಕಳ ಹಕ್ಕುಗಳು ಮತ್ತು ಶಿಕ್ಷಣದ ಮಹತ್ವವನ್ನು ಸಾರುವ ಸಲುವಾಗಿ ನವೆಂಬರ್ 14 ರಂದು ದೇಶಾದ್ಯಂತ ಮಕ್ಕಳ ದಿನಾಚರಣೆಯನ್ನು ಆಚರಿಸಲಾಗುತ್ತದೆ.ಇನ್ನೂ ಮಕ್ಕಳು ಮೋಬೈಲ್ ಹಿರಿಯುವುದನ್ನು ಬಿಟ್ಟು ಓದುವ ಕಡೆ ಹವ್ಯಾಸ ಬೆಳಸಿಕೊಳ್ಳಿ ಎಂದು ಶಾರದಾ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯ ರು ಹಾಗೂ ಮಕ್ಕಳ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ತಿಮ್ಮಯ್ಯ ಶೆಟ್ಟಿ ಇಲ್ಲೂರು ಹೇಳಿದರು

ಅವರು ಸೋಮವಾರ ದಂದು ಬಸವ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ದೇವದುರ್ಗದಲ್ಲಿ ಆಯೋಜಿಸಿದ್ದ ಮಕ್ಕಳ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಆಧುನಿಕ ಯುಗದಲ್ಲಿ ಮೊಬೈಲ್ ಗಿಳು ಬಹಳ ಆಗಿದೆ, ಪುಸ್ತಕ ಅಭ್ಯಾಸ ಕಡಿಮೆ ಆಗುತ್ತಿದೆ ಎಂದು ಮಾರ್ಮಿಕವಾಗಿ ನುಡಿದರು, ಶಾಲೆಯಲ್ಲಿ ಆಂಗ್ಲ ಭಾಷೆ ಕಲಿಯಿರಿ ಮನೆ ಮತ್ತು ಸಮಾಜದಲ್ಲಿ ಮಾತೃ ಭಾಷೆ ಕನ್ನಡವನ್ನು ಮಾತನಾಡಿ ಎಂದು ಹೇಳಿದರು.

ನಂತರ ಯುವ ಕವಿ, ಲೇಖಕ ಮಲ್ಲಿಕಾರ್ಜುನ ನಾಯಕ ಕಾಯರ್ಕ್ರಮ ಕುರಿತು ಮಾತನಾಡಿ ಬಸವ ಶಿಕ್ಷಣ ಸಂಸ್ಥೆ ವಿದ್ಯಾಕಾಶಿ ಆಗುವುದರಲ್ಲಿ ಯಾವುದೇ ಸಂದೇಹವಿಲ್ಲಾ, ಸಮಾಜಕ್ಕೆ ವಿದ್ಯಾವಂತ ಪ್ರಜೆಗಳನ್ನ ನೀಡುತ್ತಿರುವುದು ಶ್ಲಾಘನಿಯ, ಸಾಲುಮರದ ತಿಮ್ಮಕ್ಕರನ್ನ ನೆನೆದು ಬಸವ ಶಿಕ್ಷಣ ಸಂಸ್ಥೆಯು ಸಸಿ ನೆಟ್ಟು ಸಂಕೇತಿಕವಾಗಿ ಮೌನಾಚಾರಣೆ ಮಾಡಿ ವೃಕ್ಷಮಾತೇ ನೆನೆಯುತ್ತಿರುವು ಬಹಳ ಅವಿಸ್ಮರಣೀಯ ಎಂದು ಹೇಳಿದರು,

ಈ ಸಂದರ್ಭದಲ್ಲಿ ಬಸವ ಶಿಕ್ಷಣ ಸಂಸ್ಥೆಯ ಗೌರವ ಸಲಹೆಗಾರರಾದ ತಿರುಪತಿ ಸೂಗೂರು, ಶ್ಯಾಮ್ ಸುಂದರ್, ಹನುಮಂತ್ರಾಯ, ವೇಣು, ಪ್ರಭುರಾಯ, ಎ.ಎಸ್.ಕೆ.ಸ್ವಾಮಿ, ಗುರುನಾಥ, ನೀರಂಜನ್' ಮಸರಕಲ್, ಮನುನಾಥ, ಅಮೃತ, ಫಯಾಜ್, ಸಂಸ್ಥೆಯ ಶಿಕ್ಷಕ ವೃಂದ, ಉಪನ್ಯಾಸಕರು, ರವಿ ರಾಯಚೂರ್ಕರ್ ಅವರು ವೇದಿಕೆ ನಿರೂಪಣೆ ಮಾಡಿದರು, ಈ ವೇಳೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳು ಮತ್ತು ಪೋಷಕರು ಇದ್ದರು.

## ನ.24 ರಿಂದ ಶ್ರೀ ಸೂಗೂರೇಶ್ವರ ಜಾತ್ರಾ ಮಹೋತ್ಸವ

ಯುವಮಾರ್ಗ ಸುದ್ದಿ



**ಅರಕೇರಾ,ನ.19–**ಪಟ್ಟಣದ ಭಕ್ತರ ಆರಾಧ್ಯ ದೈವ ಶ್ರೀ ಸೂಗೂರೇಶ್ವರ ಜಾತ್ರಾ ಮಹೋತ್ಸವ ನ.24 ರಿಂದ ನ.28 ರವರೆಗೆ ಶ್ರೀ ಚಂದ್ರಶೇಖರಯ್ಯ ಸ್ವಾಮಿ ಹಿರೇಮಠ ಸಾನಿಧ್ಯದಲ್ಲಿ ಜರುಗಲಿದೆ.

ನ.24 ರಂದು ಸಾಯಂಕಾಲ ಸಹಸ್ರ ದೀಪೋತ್ಸವ, ನ.25 ಬೆಳಗಿನ ಜಾವ ಊಟಿ ಬಸವೇಶ್ವರದಿಂದ ಮತ್ತು ಗಂಗಾಸ್ಥಳದಿಂದ ಊರ ನಾರಿಯರು ತಂದ ಉದಕದಿಂದ ದೇವರಿಗೆ ಅಭಿಷೇಕ ಮಾಡಲಾಗುವುದು. ಬೆ.11.30 ರಿಂದ ಶಾಲಾ ಮಕ್ಕಳಿಂದ ರಂಗೋಲಿ ಸ್ಪರ್ಧೆ, ಮಧ್ಯಾಹ್ನ ಎಲೆ ಪೂಜೆ, ಗಣಾರಾಧನೆ, ಸಂಜೆ 5 ಗಂಟೆಯಿಂದ ಕಳಸಗಳು ಗಂಗಾ ಸ್ಥಳದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಡವು, ವಚನ, ನಂದಿಕೋಲು ಸೇವೆಯೊಂದಿಗೆ ಮೆರವಣಿಗೆ ನಡೆಸಲಾಗುವುದು. ನಂತರ ಉತ್ಸವ ಜರುಗಲಿದೆ.

ನ.26 ರಂದು ಬೆ.6 ರಿಂದ 8 ಗಂಟೆವರೆಗೆ ಕಳಸದ ಸೇವೆ ಹಾಗೂ ಶಿಖರದ ಮೇಲೆ ಕಳಸಗಳನ್ನು ಕೂಡಿಸಲಾಗುವುದು. ಸಂಜೆ 6.30 ಕ್ಕೆ ಮಹಾರಥೋತ್ಸವ ಜರುಗಲಿದೆ. ನ.27 ರಂದು ಬೆ.8 ಗಂಟೆಯಿಂದ ಶ್ರೀ ಅರಕೇರಾ ಬಸವಣ್ಣ ದೇವರಿಗೆ ಪೂಜೆ ಸಲ್ಲಿಸಿ ಹುಸಿ ಚೆಂಡು ತರುವುದು. ಸಾಯಂಕಾಲ 4.30 ರ ನಂತರ ಕಡುಬಿನ ಕಾಳಗ ಹಾಗೂ ಸಂಗ್ರಹಣೆ ಕಲ್ಲು ಎತ್ತುವ ಸ್ಪರ್ಧೆ ನಡೆಯಲಿದೆ. ನ.28 ರಂದು ಕಳಸದ ಪೂಜೆ ನಡೆಯಲಿದೆ ಎಂದು ದೇವಸ್ಥಾನ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

## ಸೂಗೂರೇಶ ಗುಡಿ ಗೆಲುವು ಸಂಘದ ಬಲವರ್ಧನೆಗೆ ಹೊಸ ದಿಕ್ಕು ಬಿಜೆಪಿ ಹಿರಿಯ ಮುಖಂಡ ಕೆ.ಅನಂತರಾಜ ನಾಯಕ್ ಪ್ರಶಂಸೆ

ಯುವಮಾರ್ಗ ಸುದ್ದಿ



**'ಅರಕೇರಾ,ನ.19–** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷರಾಗಿ ವರದಿಗಾರರಾದ ಸೂಗೂರೇಶ ಎಸ್. ಗುಡಿ ಅವರು ಆಯ್ಕೆಯಾದ ಹಿನ್ನಲೆಯಲ್ಲಿ, ಮಾಜಿ ಸಚಿವ ಕೆ. ಶಿವನಗೌಡ ನಾಯಕ ಅವರ ನಿವಾಸದಲ್ಲಿ ಅಭಿನಂದನಾ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಹಿರಿಯ ಮುಖಂಡ ಕೆ. ಅನಂತರಾಜ ನಾಯಕ, ಪತ್ರಕರ್ತ ಸೂಗೂರೇಶ ಗುಡಿ ಅವರ ಪತ್ರಿಕೋದ್ಯಮದಲ್ಲಿನ ಸಾಧನೆ, ಸಮತೋಲನದ ವರದಿ ಶೈಲಿ, ಸಂಘಟನಾ ಹೊಣೆಗಾರಿಕೆ ಹಾಗೂ ಪತ್ರಕರ್ತರ ಸಮಸ್ಯೆಗಳ ಪರಿಹಾರಕ್ಕಾಗಿ ಅವರು ತೋರಿಸಿರುವ ಹೋರಾಟ ಮನೋಭಾವವನ್ನು ಹೃತ್ಪೂರ್ವಕವಾಗಿ ಶ್ಲಾಘಿಸಿದರು.

ಸೂಗೂರೇಶ ಗುಡಿ ಅವರು ಕೇವಲ ವರದಿಗಾರರಾಗಿರದೇ, ಪತ್ರಕರ್ತರ ಒಗ್ಗಟ್ಟಿಗೆ ದಾರಿ ದೀಪದಂತಿರುವ ಮಾರ್ಗದರ್ಶಕ ವ್ಯಕ್ತಿತ್ವ. ಅವರ ನಿಷ್ಠೆ, ಜವಾಬ್ದಾರಿತನ ಮತ್ತು ತಟಸ್ಥ ನಿಲುವು ಇಂದಿನ ಪತ್ರಿಕೋದ್ಯಮಕ್ಕೆ ಅತ್ಯಂತ ಅಗತ್ಯವಾದ ಗುಣಗಳು. ಇಂಥವರ ನುಡಿ ಹಾಗೂ ನಡೆ ಸಂಘದ ಶಕ್ತಿಯನ್ನು ಸಾವಿರ ಪಟ್ಟು ಹೆಚ್ಚಿಸುತ್ತದೆ ಎಂದು ಪ್ರಶಂಸಿಸಿದರು.

ಗುಡಿ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಸುಧೀರ್ಘ ವರ್ಷಗಳ ಪರಿಶ್ರಮಕ್ಕೆ ಪತ್ರಕರ್ತ ಸಮುದಾಯ ನೀಡಿದ ಮಾನ್ಯತೆ. ಜಿಲ್ಲಾ ಪತ್ರಕರ್ತರ ಹಿತಕ್ಕಾಗಿ ಅವರು ಮುಂದುವರೆಸಿ ಮಾಡುವ ಕೆಲಸಗಳು ಮಾದರಿಯಾಗಲಿ ಎಂದು ಅಭಿನಂದಿಸಿದರು.

ಸಂದರ್ಭದಲ್ಲಿ ಬಿಜೆಪಿ ಹಿರಿಯ ಮುಖಂಡರಾದ ಕೆ ಅನಂತರ ನಾಯಕ ವೆಂಕಟೇಶ ನಾಯಕ ದೊರೆ. ಕೆ ಭಗವಂತರಾಯ ನಾಯಕ ರಾಚಯ್ಯ ಸ್ವಾಮಿ ಮಠಪತಿ.ಹಮ್ಮು ಪೂಜಾರಿ ರವಿ ನಾಯಕ ಸಿದ್ದಪ್ಪ ಪೈಕಾರ ನಾಗರಾಜ ಕರ್ನಾಳ ವಿಶ್ವನಾಥ ಹೊಸಮನಿ ತನೋಜ್ ಕುಮಾರ್ ವೆಂಕಟೇಶ ನಾಯಕ ಕರ್ನಾಳ ಹಾರನ್ ಕೂಲ್ ವೀರೇಶ್ ಬೇರಿ ಶಿವು ಗುಜುಪು ಭೀಮಣ್ಣ ಭಗವಂತರಾಯ ತಾತೆ ಅಬ್ದುಲ್ ಮಾಜೀದ್ ಮುದುಕಪ್ಪ ಮೆಣಸಿನ ಕಾಯಿ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು

## ಪ್ರವಾಸೋದ್ಯಮ ಮಾರ್ಗದರ್ಶಿ ತರಬೇತಿ; ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ರಾಯಚೂರು,ನ.19–** ಪ್ರವಾಸೋದ್ಯಮ ಇಲಾಖೆಯಿಂದ 2024–25ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ ಹಾಗೂ ಟಿ.ಎಸ್.ಪಿ ಯೋಜನೆಯಡಿ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟದ ಭಾಗದ 08 ಜಿಲ್ಲೆಗಳಲ್ಲಿ ಪ್ರವಾಸಿ ತಾಣಗಳನ್ನು ಉತ್ತೇಜಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಒಂದು ತಿಂಗಳ ಪ್ರವಾಸಿ ಮಾರ್ಗದರ್ಶಿ ತರಬೇತಿಗೆ ಆಹ್ವಾನಿಸಲಾಗಿದ್ದು, ಅರ್ಜಿಯ ಅವಧಿಯನ್ನು ನವೆಂಬರ್ 29ರವರೆಗೆ ವಿಸ್ತರಿಸಲಾಗಿದೆ.

ಅಭ್ಯರ್ಥಿಗಳಿಗೆ ಒಂದು ತಿಂಗಳ ಪ್ರವಾಸಿ ಮಾರ್ಗದರ್ಶಿ ತರಬೇತಿ ಹಾಗೂ ಈ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಜಾಕೆಟ್ ಹಾಗೂ ಒಂದು ಜೊತೆ ಸ್ಪೋರ್ಟ್ಸ್ ಶೂ ಒದಗಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರಾಯಚೂರು ಜಿಲ್ಲೆಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ–11 ಹಾಗೂ ಪಂಗಡದ–09 ಗುರಿ ನಿಗದಿಪಡಿಸಲಾಗಿದ್ದು, ಪರಿಶಿಷ್ಟ ಜಾತಿ–10 ಹಾಗೂ ಪರಿಶಿಷ್ಟ ಪಂಗಡ–08 ಗುರಿಗಳು ಬಾಕಿ ಉಳಿದಿರುತ್ತವೆ.ಅಭ್ಯರ್ಥಿಗಳಿಗೆ ಕನಿಷ್ಠ 21 ರಿಂದ ಗರಿಷ್ಠ 48 ವಯೋಮಿತಿಯೊ ಳಗಿರಬೇಕು. ಆಸಕ್ತರು, ಅರ್ಜಿಗಳನ್ನು ಕಚೇರಿಯಿಂದ ಪಡೆದು ಅರ್ಜಿ ಸಲ್ಲಿಸಲು ಹೊಂದಿರಬೇಕಾದ ಅರ್ಹತಾ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ದಾಖಲೆಗಳನ್ನು ಸ್ವಯಂ ದೃಢೀಕರಿಸಿ ನವೆಂಬರ್ 29ರೊಳಗಾಗಿ ಸಲ್ಲಿಸಬಹುದಾಗಿದೆ. ಅವಧಿ ಮುಂಗಿದ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆ, ಗಣೇಶ ಗುಡಿ ಹತ್ತಿರ, ನಿಜಲಿಂಗಪ್ಪ ಕಾಲೋನಿ, ರಾಯಚೂರು ಜಿಲ್ಲೆ–584101, ದೂರವಾಣಿ ಸಂಖ್ಯೆ:08532200677, ಕಚೇರಿ ಸಿಬ್ಬಂದಿ ದೂರವಾಣಿ ಸಂಖ್ಯೆ; 9686203534ಗೆ ಕಚೇರಿಗೆ ಕರ್ತವ್ಯದ ವೇಳೆಯಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ನಜೀರ ಅಹ್ಮದ್ ಕನವಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಾಣಕ್ಯ ಆಡಳಿತ ತರಬೇತಿ ಯೋಜನೆಗೆ ಅರ್ಜಿ ಆಹ್ವಾನ

**ರಾಯಚೂರು,ನ.19–** ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ರಾಜ್ಯದ ಬ್ರಾಹ್ಮಣ ಸಮುದಾಯದ ಪ್ರತಿಭಾವಂತ ಪದವೀಧರರು, ನಾಗರಿಕ ಸೇವೆಗಳಾದ ಐ.ಎ.ಎಸ್. ಅಥವಾ ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಭಾರತದ ಹಾಗೂ ಕರ್ನಾಟಕದ ಆಡಳಿತಾತ್ಮಕ ಸೇವೆಗಳಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡುವ ಸಲುವಾಗಿ ಚಾಣಕ್ಯ ಆಡಳಿತ ತರಬೇತಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.ಅರ್ಹ ಬ್ರಾಹ್ಮಣ ಸಮುದಾಯದ ಫಲಾನುಭವಿಗಳು ಚಾಣಕ್ಯ ಆಡಳಿತ ತರಬೇತಿ ಯೋಜನೆಯಡಿ ನೋಂದಾಯಿಸಿಕೊಳ್ಳಲು ವೆಬ್ ಸೈಟ್: www.ksbdb.karnataka.gov.in ಲಿಂಕ್ ಮೂಲಕ ಡಿಸೆಂಬರ್ 15ರ ಸಂಜೆ 5 ಗಂಟೆಯೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಈ ಯೋಜನೆಯಲ್ಲಿ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳು ಐ.ಎ.ಎಸ್ ಅಥವಾ ಕೆ.ಎ.ಎಸ್. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ತರಬೇತಿ ಪಡೆಯುವ ಸಂಬಂಧ 2025–26ನೇ ಸಾಲಿನಲ್ಲಿ ಪ್ರವೇಶಾತಿ ಪಡೆದು ಪಾವತಿಸಲಾದ ತರಬೇತಿ ಶುಲ್ಕದ ಮೊತ್ತದಲ್ಲಿ ಗರಿಷ್ಠ ರೂ.1 ಲಕ್ಷ ಗಳಿಗೆ ಮಿತಿಗೊಳಿಸಿ ಡಿಬಿಟಿ ಮೂಲಕ ನೇರವಾಗಿ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ: 9986332736 ಗೆ ಕರೆ ಮಾಡಿ ಬೆಳಿಗ್ಗೆ 10 ರಿಂದ ಸಂಜೆ 5.30 ರವರೆಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೌಶಲ್ಯ ಮಿಷನ್‌ನ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳಾದ ಜಿ.ಯು. ಹುಡೇದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೊಲಿಗೆಯಂತ್ರ ವಿತರಣಾ ಯೋಜನೆಗೆ ಅರ್ಜಿ ಸಲ್ಲಿಸಲು ಡಿಸೆಂಬರ್ 06 ಕೊನೆಯ ದಿನ

**ರಾಯಚೂರು,ನ.19–** ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2025–26ನೇ ಸಾಲಿನ ಹೊಲಿಗೆ ಯಂತ್ರ ವಿತರಣಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಹಾಗೂ ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ಅರ್ಹ ಫಲಾನುಭವಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ದಾಖಲಾತಿಗಳು: ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ಈ ಯೋಜನೆಗೆ ಅರ್ಜಿ ಸಲ್ಲಿಸಲು ಪ್ರವರ್ಗ–3–ಬಿ ಅಡಿಯಲ್ಲಿ 2(ಎ) ಯಿಂದ 2(ಎಫ್)ವರೆಗೆ ಬರುವ ಸಮುದಾಯಕ್ಕೆ ಸೇರಿರಬೇಕು. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನಮೂನೆ–3ಬಿ ಯಲ್ಲಿ ಪಡೆದಿರುವ ಪ್ರಮಾಣ ಪತ್ರವು ಚಾಲ್ತಿಯಲ್ಲಿರಬೇಕು. ಅರ್ಜಿದಾರರು ಕರ್ನಾಟಕ ರಾಜ್ಯದವರಾಗಿರಬೇಕು ಹಾಗೂ ಅವರ ಖಾಯಂ ವಿಳಾಸವು ಕರ್ನಾಟಕ ರಾಜ್ಯದಲ್ಲಿರಬೇಕು ಹಾಗೂ ಆಧಾರ್ ಕಾರ್ಡ್ ಹೊಂದಿರಬೇಕು. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳನ್ನು ಮೀರಿರತಕ್ಕದ್ದಲ್ಲ. ಒಂದು ಕುಟುಂಬದಲ್ಲಿ ಓರ್ವ ಸದಸ್ಯರನ್ನು ಮಾತ್ರ ಈ ಸೌಲಭ್ಯಕ್ಕೆ ಪರಿಗಣಿಸಲಾಗುವುದು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶದಲ್ಲಿ ರೂ.98.000 ಗಳು ಹಾಗೂ ನಗರ ಪ್ರದೇಶದಲ್ಲಿ ರೂ. 1,20.000 ಗಳನ್ನು ಮೀರತಕ್ಕದ್ದಲ್ಲ. ಅಂಗವಿಕಲ ಮಹಿಳೆಯರಿಗೆ ಶೇ.5 ರಷ್ಟು ಮೀಸಲಿರಿಸಲಾಗಿದೆ. ಆಯ್ಕೆ ಮಾಡುವಾಗ ಮಹಿಳೆಯರಿಗೆ ಶೇ.33ರಷ್ಟು, ವಿಕಲಚೇತನರಿಗೆ ಶೇ.5ರಷ್ಟು ಹಾಗೂ ತೃತೀಯ ಲಿಂಗಳಿಗೆ ಶೇ.1ರಷ್ಟು ಅಂಗವಿಕಲ ಮಹಿಳೆಯರಿಗೆ ಶೇ.2 ರಷ್ಟನ್ನು ಮೀಸಲಿರಿಸಲಾಗುವುದು. ವಿಧವೆಯರಿಗೆ, ಪರಿತ್ಯಕ್ತ ಮಹಿಳೆಯರಿಗೆ ಹೆಚ್.ಐ.ವಿ ಪೀಡಿತರಿಗೆ 35 ವರ್ಷವಯೋಮಿತಿ ಮೀರಿರತಕ್ಕ ಅವಿವಾಹಿತ ಮಹಿಳೆಯರಿಗೆ ಶೇ.2 ರಷ್ಟನ್ನು ಮೀಸಲಿರಿಸಲಾಗಿದೆ.ಈ ಯೋಜನೆಗೆ ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಡಿಸೆಂಬರ್ 06ರರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ವಿಶೇಷ ಸೂಚನೆ: ನಿರ್ದೇಶಕರ ಮಂಡಳಿಯ ವಿವೇಚನಾ ಕೋಟಾದಡಿ ಸೌಲಭ್ಯ ಪಡೆಯಬಯಸುವವರು ಸಹ ಆನ್ ಲೈನ್ ನಲ್ಲಿ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು ಹಾಗೂ ಒಂದು ಕುಟುಂಬದ ಒಬ್ಬ ಸದಸ್ಯರು ಮಾತ್ರ ಈ ಯೋಜನೆಯಲ್ಲಿ ಒಂದು ಸಲ ಸೌಲಭ್ಯ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಿಗಮದ ಸಹಾಯವಾಣಿ: 8867537799 ಮತ್ತು ದೂರವಾಣಿ ಸಂಖ್ಯೆ; 080–29903994, ಹಾಗೂ ಕಚೇರಿಯ ವಿಳಾಸ https://kmcdc.karnataka.gov.in ಗೆ, ಬೆಳಗ್ಗೆ 10 ರಿಂದ ಸಂಜೆ 5.30ರ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 1.33 ಲಕ್ಷ ರೂ.ಮೌಲ್ಯದ ಪಡಿತರ ಅಕ್ಕಿ ಜಪ್ತಿ

**ಕಲಬುರಗಿ,ನ.19–**ನಗರದ ಖಾಜಾ ಕಾಲೋನಿಯ ಮನೆಯೊಂದರಲ್ಲಿ ಶೆಟರ್ ಕೋಣೆಯಲ್ಲಿ ಸಾರ್ವಜನಿಕರಿಗೆ ವಿತರಿಸಿದ ಪಡಿತರ ಅಕ್ಕಿ ಹಾಗೂ ಸರಕಾರದ ಇತರೆ ಯೋಜನೆ ಅಡಿಯಲ್ಲಿ ವಿತರಿಸಲಾದ ಪಡಿತರ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿ ಇಡಲಾಗಿದೆ ಎಂಬ ಮಾಹಿತಿ ಮೇಲೆ ಆಹಾರ ನಿರೀಕ್ಷಕರಾದ ವಿದ್ಯಾಶ್ರೀ ಹಾಗೂ ರೋಜಾ ಪೊಲೀಸ್ ಠಾಣೆಯ ಎಎಸ್‌ಐಗಳಾದ ದಾಮೋದರ, ನರ್ಮದಾ, ಫಜಲ್ ರೆಹಮಾನ್, ಸಿಬ್ಬಂದಿ ಹಮಿದೊದ್ದೀನ್ ಅವರು ದಾಳಿ ನಡೆಸಿ ಗುಲಶನ್ ಅರಾಫತ್ ಕಾಲೋನಿಯ ಜಮೀರ್ ತಂದೆ ಯುಸೂಫ್ (38) ಎಂಬಾತನನ್ನು ವಶಕ್ಕೆ ಪಡೆದು 1,33, 280 ರೂ.ಮೌಲ್ಯದ 40 ಕೆಜಿ ತೂಕವುಳ್ಳ 98 ಚೀಲ ಅಕ್ಕಿಯನ್ನು ಜಪ್ತಿ ಮಾಡಿದ್ದಾರೆ. ರೋಜಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H